ಸುದ್ದಿ ಹಾಗೂ ಜಾಹೀರಾತಿಗೆ ಸಂಪರ್ಕಿಸಿ
9980498553
9606979449

RNI: KNKAN/ 25/A2724

Email
uttarkarnatkasuddigalu@gmail.com

# ಉತ್ತರ ಕರ್ನಾಟಕ ಸುದ್ದಿಗಳು

UTTARA KARNATAKA SUDDIGALU
Kannada Daily Morning

ಕನ್ನಡ ದಿನಪತ್ರಿಕೆ

ಸಂಪಾದಕರು: ಅವಿನಾಶ ಎಸ್. ಸಾಲಿಮನಿ








ಎಸ್.ವಿ. ಸಂಕನೂರ ಗೆಲುವು ಖಚಿತ; ಶಾಸಕ ಸಿಸಿ ಪಾಟೀಲ ಹೇಳಿಕೆ »2

ಪ್ರಜಾಪ್ರಭುತ್ವ ಪರಿಕಲ್ಪನೆಗೆ ಬಸವಣ್ಣನ ಅನುಭವ ಮಂಟಪವೇ ಪ್ರೇರಣೆ »2

15 ರೊಳಗೆ ಕೆರೆ ತುಂಬಿಸಲು ಗಡುವು »3



ಸಂಪುಟ(Volume): 1 ಸಂಚಿಕೆ (Issue): 299 ● ಪುಟ (Page): 4 ● ದರ: Rs. 4 ಬುಧವಾರ 14 ಅಕ್ಟೋಬರ್ 2026 ● 14 OCTOBER 2026 ● ಧಾರವಾಡ ● ಹಾವೇರಿ ● ಗದಗ ● ಕೊಪ್ಪಳ ● ವಿಜಯನಗರ ● ರಾಯಚೂರು ● ವಿಜಯಪುರ ● ಬಾಗಲಕೋಟೆ ● ಬೆಳಗಾವಿ ಉತ್ತರ ಕನ್ನಡ


## ಜಂತರ್ ಮಂತರ್ ಗೇಟ್ ಹಾರಲೆತ್ನ

### ಕಾಕ್ರೋಚ್ ಜನತಾ ಪಾರ್ಟಿ ಕಾರ್ಯಕರ್ತರ ಗುಂಪು ಪೊಲೀಸ್ ವಶಕ್ಕೆ

**ದೆಹಲಿ:** ಜಂತರ್ ಮಂತರ್‌ನ್ನು ಪ್ರತಿಭಟನಾ ಸ್ಥಳದ ಪಟ್ಟಿಯಿಂದ ಕೇಂದ್ರ ಸರ್ಕಾರ ಕೈಬಿಟ್ಟ ಮರುದಿನವೇ, ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನಾಯಕರಾದ ಅಶುತೋಷ್ ರಂಕಾ ಮತ್ತು ಸೌರವ್ ದಾಸ್ ನೇತೃತ್ವದ ಕಾರ್ಯಕರ್ತರ ಗುಂಪು, ಜಂತರ್ ಮಂತರ್ ಗೇಟ್ ಹಾರಲೆತ್ನಿಸಿ ಪೊಲೀಸರ ವಶವಾಗಿದೆ.

ಜಂತರ್ ಮಂತರ್‌ನಲ್ಲಿ ನಡೆಸಿದ ದಿಢೀರ್ ಪ್ರತಿಭಟನೆಯ ವಿಡಿಯೋವೊಂದನ್ನು, ಸಿಜೆಪಿ ಸಂಸ್ಥಾಪಕ ಅಭಿಜಿತ್ ದಿಪ್ಕೆ ಅವರು ತಮ್ಮ ಅಧಿಕೃತ ಎಕ್ಸ್ ಅಕೌಂಟ್‌ನಲ್ಲಿ ಹಂಚಿಕೊಂಡಿದ್ದಾರೆ. ಇದರಲ್ಲಿ ಸಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಲು ಕಬ್ಬಿಣದ ಗೇಟ್ ಮತ್ತು ಪೊಲೀಸ್ ಬ್ಯಾರಿಕೇಡ್‌ಗಳನ್ನು ಹತ್ತಿ ಜಂತರ್ ಮಂತರ್ ಆವರಣವನ್ನು ಪ್ರವೇಶಿಸುತ್ತಿರುವುದು ಕಂಡುಬರುತ್ತದೆ. ಆದರೆ ದೆಹಲಿ ಪೊಲೀಸರು ಸಿಜೆಪಿ ನಾಯಕರನ್ನು ವಶಕ್ಕೆ ಪಡೆದು–ಕೊಂಡರು. ಪ್ರತಿಭಟನಾ ಸ್ಥಳ ಪಟ್ಟಿಯಿಂದ ಜಂತರ್ ಮಂತರ್ ಹೊರಗಿಟ್ಟ ಆದೇಶ, ಸಿಜೆಪಿ ನಾಯಕರನ್ನು ಕೆರಳಿಸಿದೆ.

ಪ್ರತಿಭಟನೆಯ ವಿಡಿಯೋದಲ್ಲಿ, ಸಿಜೆಪಿ ನಾಯಕರಾದ ಅಶುತೋಷ್ ರಂಕಾ ಮತ್ತು ಸೌರವ್ ದಾಸ್ ಹಾಗೂ ಇತರ ಕಾರ್ಯಕರ್ತರು, ಕೈಯಲ್ಲಿ ರಾಷ್ಟ್ರ ಧ್ವಜಗಳನ್ನು ಹಿಡಿದುಕೊಂಡು ಗೇಟ್ ಹಾರಿ, ಪ್ರತಿಭಟನೆ ನಡೆಸಲು ಆವರಣದೊಳಗೆ ಪ್ರವೇಶಿಸುತ್ತಿರುವುದು ಕಾಣಿಸುತ್ತದೆ. ಅಲ್ಲಿ ನಿಯೋಜನೆಗೊಂಡಿದ್ದ ಪೊಲೀಸರು ಬೆನ್ನಟ್ಟುತ್ತಿದ್ದಂತೆಯೇ ಆ ಗುಂಪು ಘೋಷಣೆಗಳನ್ನು ಕೂಗಿತು. 'ಭಾರತ ಮಾತಾ ಕಿ ಜೈ' ಮತ್ತು 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆಗಳನ್ನು ಕೂಗುತ್ತಾ ಮುನ್ನಡೆಯುತ್ತಿದ್ದ ಸಿಜೆಪಿ ನಾಯಕರನ್ನು, ದೆಹಲಿ ಪೊಲೀಸರು ವಶಕ್ಕೆ ಪಡೆದುಕೊಂಡರು.

**ಅಭಿಜಿತ್ ದಿಪ್ಕೆ ಹೊಗಳಿಕೆ:** ಇನ್ನು ತಮ್ಮ ಸಂಘಟನೆಯ ನಾಯಕರು ಮತ್ತು ಕಾರ್ಯಕರ್ತರು ಜಂತರ್ ಮಂತರ್ ಗೇಟ್ ಹಾರೆಲೆತ್ನಿಸಿದ್ದನ್ನು, ಸಿಜೆಪಿ ಸಂಸಾಪಕ ಅಭಿಜಿತ್ ದಿಪ್ಕೆ ಹಾಡಿಹೊಗಳಿದ್ದಾರೆ. "ದೆಹಲಿ ಪೊಲೀಸರು ವಶಕ್ಕೆ ಪಡೆಯುವ ಮುನ್ನ, ಇಂದು (ಅ.13–ಮಂಗಳವಾರ) ಮುಂಜಾನೆ ತ್ರಿವರ್ಣ ಧ್ವಜ ಹಿಡಿದಿದ್ದ ಜಿರಲೆಗಳು ಜಂತರ್ ಮಂತರ್ ಪ್ರವೇಶಿಸಿದವು. ನಮ್ಮ ತಂಡದ ಪ್ರಮುಖ ನಾಯಕರನ್ನು ಮತ್ತು ಸದಸ್ಯರನ್ನು ವಶಕ್ಕೆ ಪಡೆಯಲಾಗಿದೆ. ನೀವು ಪ್ರತಿರೋಧವನ್ನು ರದ್ದುಗೊಳಿಸಲು ಸಾಧ್ಯವಿಲ್ಲ" ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಉಲ್ಲೇಖಿಸಿ, ಅಭಿಜಿತ್ ದಿಪ್ಕೆ ಎಕ್ಸ್ ಪೋಸ್ಟ್ ಮಾಡಿದ್ದಾರೆ.



**ಪ್ರತಿಭಟನೆಗಳಿಗೆ ಮೂರು ಹೊಸ ಸ್ಥಳಗಳು**

ಇನ್ನು ಜಂತರ್ ಮಂತರ್‌ನಲ್ಲಿ ಪ್ರತಿಭಟನೆಗಳಿಗೆ ಅವಕಾಶವಿಲ್ಲ ಎಂದಿರುವ ಕೇಂದ್ರ ಗೃಹ ಸಚಿವಾಲಯ, ರಾಮಲೀಲಾ ಮೈದಾನ, ಬುರಾರಿ ಮೈದಾನ ಮತ್ತು ಸಿಬಿಡಿ ಮೈದಾನಗಳನ್ನು, ದೆಹಲಿಯಲ್ಲಿ ಪ್ರತಿಭಟನೆ ನಡೆಸಲು ಸೂಚಿಸಿರುವ ಮೂರು ಹೊಸ ಸ್ಥಳಗಳನ್ನು ಘೋಷಿಸಿದೆ.

ಜಂತರ್ ಮಂತರ್ ಅನ್ನು ಪ್ರತಿಭಟನಾ ಸ್ಥಳದ ಪಟ್ಟಿಯಿಂದ ಕೈಬಿಡುವ ಕೇಂದ್ರ ಸರ್ಕಾರದ ಆದೇಶವನ್ನು ತೀವ್ರವಾಗಿ ಟೀಕಿಸಿರುವ ಸಿಜೆಪಿ ನಾಯಕ ಅಭಿಜಿತ್ ದಿಪ್ಕೆ, "ಇಡೀ ದೇಶವೇ ಜಂತರ್ ಮಂತರ್ ಆಗಿ ಬದಲಾಗಲಿದೆ" ಎಂದು ಎಚ್ಚರಿಸಿದ್ದಾರೆ.

"ಜಂತರ್ ಮಂತರ್ ಅನ್ನು ಅಧಿಕೃತ ಪ್ರತಿಭಟನಾ ಸ್ಥಳದ ಪಟ್ಟಿಯಿಂದ ತೆಗೆದುಹಾಕಿರುವ ಕ್ರಮದಿಂದಲೇ, ಪ್ರಧಾನಿ ಮೋದಿ ಅವರ ಭಯ ಎದ್ದು ಕಾಣುತ್ತಿದೆ. ಜಂತರ್ ಮಂತರ್ ಇನ್ನು ಮುಂದೆ ಪ್ರತಿಭಟನಾ ಸ್ಥಳವಾಗಿರುವುದಿಲ್ಲವಾದರೆ ಪ್ರತಿಭಟನೆಗಳು ನಿಲ್ಲುತ್ತವೆ ಎಂದು ಅವರು ಭಾವಿಸಿದ್ದಾರೆ. ಆದರೆ ಇನ್ನು ಮುಂದೆ ದೇಶಾದ್ಯಂತ ಜಂತರ್ ಮಂತರ್‌ನಂತಹ ಪ್ರತಿಭಟನಾ ಸ್ಥಳಗಳು ತಲೆ ಎತ್ತಲಿವೆ" ಎಂದು ಅಭಿಜಿತ್ ದಿಪ್ಕೆ ಪ್ರತಿಪಾದಿಸಿದ್ದಾರೆ.

## ಐಪಿಎಸ್ ಅಧಿಕಾರಿ ಎಸ್ ರವಿ ಅವರು ದಿಢೀರ್ ರಾಜೀನಾಮೆ



**ಬೆಂಗಳೂರು:** ರಾಜ್ಯದ ಆಡಳಿತ ವರ್ಗದಲ್ಲಿ ಮಹತ್ವದ ಬದಲಾವಣೆಗಳು ನಡೆ–ಯುತ್ತಿದ್ದು, ಇದೀಗ ಐಪಿಎಸ್ ಅಧಿಕಾರಿ ಎಸ್ ರವಿ ಅವರು ದಿಢೀರ್ ರಾಜೀನಾಮೆ ಸಲ್ಲಿಕೆ ಮಾಡಿದ್ದಾರೆ.

ಸದ್ಯ ಕೆಎಸ್‌ಆರ್ ಪಿಯಲ್ಲಿ ಎಡಿಜಿಪಿ ಆಗಿ–ರೋ ಎಸ್ ರವಿ ಅವರು ದಿಢೀರ್ ರಾಜೀನಾಮೆ ಸಲ್ಲಿಕೆ ಮಾಡಿದ್ದು, ರಾಜೀನಾಮೆಗೆ (ಖಚಿರಂಟೆ) ಕಾರಣ ಏನು ಅನ್ನೋದೇ ಕುತೂಹಲ ಮೂಡಿಸಿದೆ.

ಐಪಿಎಸ್ ಅಧಿಕಾರಿ ಎಸ್ ರವಿ ಅವರು ಡಿಜಿ ಕಚೇರಿಗೆ ರಾಜೀನಾಮೆ ಸಲ್ಲಿಕೆ ಮಾಡಿದ್ದು, ವೈಯಕ್ತಿಕ ಕಾರಣಗಳನ್ನು ನೀಡಿದ್ದಾರೆ ಎಂದು ತಿಳಿದು ಬಂದಿದೆ. 1998ರ ಬ್ಯಾಚ್ ನ ಐಪಿಎಸ್ ಅಧಿಕಾರಿ ರವಿ , ಈ ಹಿಂದೆ ಗುಪ್ತಚರ ಇಲಾಖೆಯ ಎಡಿಜಿಪಿ ಆಗಿದ್ದರು. ಡಿಕೆ ಶಿವಕುಮಾರ್ ಅವರು ಸಿಎಂ ಆದ ಬಳಿಕ ಇವರನ್ನ ಏಖಖಕ ಎಡಿಜಿಪಿ ಆಗಿ ವರ್ಗಾವಣೆ ಮಾಡಲಾಗಿತ್ತು.

ರವಿ ಅವರಿಗೆ ನಿವೃತ್ತಿಗೆ ಆರು ತಿಂಗಳು ಬಾಕಿ ಇತ್ತು. ಇದೀಗ ಸ್ವಯಂ ನಿವೃತ್ತಿಗೆ ಅರ್ಜಿ ಸಲ್ಲಿಕೆ ಮಾಡಿದ್ದು, ಡಿಜಿ ಐಜಿಪಿ ಸಲೀಂ ಅವರು ಮಾಹಿತಿಯನ್ನು ದೃಢೀಕರಿಸಿದ್ದಾರೆ. ಕೆಲ ಮೂಲಗಳ ಪ್ರಕಾರ ಹಿರಿಯ ಅಧಿಕಾರ ಜೊತೆ ಮನಸ್ತಾಪದ ಕಾರಣ ರಾಜೀನಾಮೆ ನೀಡುತ್ತಿದ್ದಾರೆ ಎಂದು ತಿಳಿದು ಬಂದಿದೆ.

## 8 ವರ್ಷ ಸಿಎಂ ಆಗಿದ್ದ ಸಿದ್ದರಾಮಯ್ಯಗೆ ಈ ಗತಿಗೆ ತಂದಿದ್ದೀರಿ: ಎಚ್‌ಡಿಕೆ ಕಿಡಿ

**ಬೆಂಗಳೂರು:** ರಾಜ್ಯದಲ್ಲಿ ರಾಜಕಾರಣಿಗಳ ವಿರುದ್ಧದ ಸ್ಟಿಂಗ್ ಆಪರೇಷನ್ ಗದ್ದಲ ಜೋರಿದ್ದು, ಈ ನಡುವೆ ವಿಡಿಯೋ ಪ್ರಸಾರ ತಡೆ ಕೋರಿ ಮಾಜಿ ಸಿಎಂ ಸಿದ್ದರಾಮಯ್ಯ ಕೋರ್ಟ್ ಮೊರೆಹೋಗಿದ್ದಾರೆ. ಇತ್ತ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದು, 8 ವರ್ಷ ಸಿಎಂ ಆಗಿದ್ದ ಸಿದ್ದರಾಮಯ್ಯ ಅವರನ್ನು ಈ ಗತಿಗೆ ತಂದಿದ್ದೀರಿ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

**ಸ್ಟಿಂಗ್ ಆಪರೇಷನ್ ಬಗ್ಗೆ ಸಿದ್ದರಾಮಯ್ಯ ಧ್ವನಿ ಎತ್ತಲಿ**

ಬೆಂಗಳೂರಿನಲ್ಲಿ ಮಂಗಳವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಚ್‌ಡಿ ಕುಮಾರಸ್ವಾಮಿಯವರು, ನಿವೃತ್ತ ಪೊಲೀಸರ ತಂಡ ಕಟ್ಟಿಕೊಂಡು ಸ್ಟಿಂಗ್ ಅಪರೇಷನ್ ನಡೆಸಲಾಗುತ್ತಿದೆ. ಈ ಕುರಿತು ಸಿಬಿಐ ತನಿಖೆ ಆಗಬೇಕು. ಸಿದ್ದರಾಮಯ್ಯ ಅವರು ಈ ಸ್ಟಿಂಗ್ ಆಪರೇಷನ್ ಬಗ್ಗೆ ದನಿ ಎತ್ತಬೇಕು ಎಂದು ಆಗ್ರಹಿಸಿದ್ದಾರೆ.

**ಮುಂದಿನ ದಿನಗಳಲ್ಲಿ ತಕ್ಕ ಬೆಲೆ:** ಸುದೀರ್ಘ ಕಾಲ ಆಡಳಿತ ನಡೆಸಿದ ಅನುಭವವಿರುವ ಸಿದ್ದರಾಮಯ್ಯನವರು ಕೋರ್ಟ್‌ಗಳಿಂದ ತಡೆಯಾಜ್ಞೆ ಪಡೆಯುವ ಬದಲು ದಿಟ್ಟವಾಗಿ ನಿಲ್ಲಬೇಕು. ಅಹಿಂದ ನಾಯಕರು ಇಂತಹ ಕೆಟ್ಟ ಬೆಳವಣಿಗೆಗಳನ್ನು ವಿರೋಧಿಸದಿದ್ದರೆ ಮುಂದಿನ ದಿನಗಳಲ್ಲಿ ತಕ್ಕ ಬೆಲೆ ತೆರಬೇಕಾಗುತ್ತದೆ. ಹೀಗಾಗಿ, ಹೋರಾಟ ಮಾಡಿ, ಉನ್ನತ ತನಿಖೆ ನಡೆಸಿ ಎಂದು ಮಹತ್ವದ ಸಲಹೆ ನೀಡಿದ್ದಾರೆ.

"ಚುನಾವಣೆಯ ಹೊಸ್ತಿಲಲ್ಲಿ ಮಾಜಿ ಪ್ರಧಾನಿ ದೇವೇಗೌಡರ ಕುಟುಂಬದ ತೇಜೋವಧೆ ಮಾಡಲು ಪೆನ್‌ಡ್ರೈವ್ ಸಂಚು ರೂಪಿಸಲಾಗಿತ್ತು. ಸದಾಶಿವನಗರದಲ್ಲಿ ಪೆನ್‌ಡ್ರೈವ್ ಸಿದ್ಧಪಡಿಸಿ ಹಂಚಿದವರ ಮೇಲೆ ಸರ್ಕಾರ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲವೇಕೆ?" ಎಂದು ಪ್ರಶ್ನಿಸಿದರು.



**ಪ್ರಜ್ವಲ್ ರೇವಣ್ಣ ವಿಡಿಯೋ ಲೀಕ್**

ಬಿಡದಿ ಟೌನ್‌ಶಿಪ್ ಹೋರಾಟವನ್ನು ಹಳಿತಪ್ಪಿಸಲು ಪ್ರಜ್ವಲ್ ರೇವಣ್ಣ ಅವರ ಜೈಲಿನ ವಿಡಿಯೋ ಲೀಕ್ ಮಾಡಲಾಯಿತು ಹಾಗೂ ಸ್ಟಿಂಗ್ ಆಪರೇಷನ್ ಮರೆಮಾಚಲು ಬೆಳಗಾವಿ ಜೈಲಿಗೆ ವರ್ಗಾಯಿಸುವ ನಾಟಕವಾಡಲಾಯಿತು. ರಾಜಕೀಯ ದ್ವೇಷಕ್ಕಾಗಿ ತಮ್ಮ ತಾಯಿಯ ಹೆಸರನ್ನೂ ಎಳೆದು ತಂದು ಕೀಳುಮಟ್ಟದ ಷಡ್ಯಂತ್ರ ಹೆಣೆದಿದ್ದಾರೆ ಎಂದು ಕುಮಾರಸ್ವಾಮಿ ಕಿಡಿಕಾರಿದ್ದಾರೆ.

## ಕಾಲಹರಣ ಮಾಡದೇ 25 ಶಾಸಕರನ್ನು ಕರೆದೊಯ್ಯಿರಿ

### ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಫೋಟಕ ಹೇಳಿಕೆಗೆ ಸಿಎಂ ಡಿಕೆ ಶಿವಕುಮಾರ ವ್ಯಂಗ್ಯ

**ಬೆಂಗಳೂರು:** "ಒಂದು ವೇಳೆ ಈಗಲೇ ಚುನಾವಣೆ ನಡೆದರೆ, ಸಚಿವರು ಸೇರಿದಂತೆ 25 ಜನ ಕಾಂಗ್ರೆಸ್ ಶಾಸಕರು ಬಿಜೆಪಿ ಸೇರಲಿದ್ದಾರೆ" ಎಂದು ಕರ್ನಾಟಕ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸ್ಫೋಟಕ ಹೇಳಿಕೆ ನೀಡಿದ್ದಾರೆ. ಈ ಹೇಳಿಕೆಯನ್ನು ವ್ಯಂಗ್ಯವಾಡಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಯಾವುದೇ ಕಾಲಹರಣ ಮಾಡದೆ ಆ ನಾಯಕರನ್ನು ಈಗಲೇ ಪಕ್ಷಕ್ಕೆ ಸೇರಿಸಿಕೊಳ್ಳುವಂತೆ ಸವಾಲು ಹಾಕಿದ್ದಾರೆ.

"ಯಾವುದೇ ಕ್ಷಣದಲ್ಲಿ ಚುನಾವಣೆ ನಡೆದರೂ, ಕಾಂಗ್ರೆಸ್‌ನ 25 ಶಾಸಕರು ಬಿಜೆಪಿಗೆ ಸೇರ್ಪಡೆ ಆಗುತ್ತಾರೆ" ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿವೈ ವಿಜಯೇಂದ್ರ ಹೇಳಿಕೆ ನೀಡಿದ್ದಾರೆ. ಆಡಳಿತ ಪಕ್ಷದ ಸಚಿವರನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, "ರಾಜ್ಯದಲ್ಲಿನ ಜನಮತ ಬಿಜೆಪಿ ಪರವಾಗಿ ಬದಲಾಗಿದೆ ಮತ್ತು ಅನೇಕ ಕಾಂಗ್ರೆಸ್ ನಾಯಕರು ಪಕ್ಷ ಬದಲಾಯಿಸಲು ಸಿದ್ಧರಿದ್ದಾರೆ" ಎಂದು ಹೇಳಿದರು.

"ನಮಗೆ ಸಚಿವರನ್ನು ಸೆಳೆಯುವ ಅಗತ್ಯವಿಲ್ಲ. ಆದರೆ ಪಕ್ಷದ ರಾಜ್ಯ ಅಧ್ಯಕ್ಷನಾಗಿ ನಾನು ಒಂದು ವಿಷಯವನ್ನು ಸ್ಪಷ್ಟವಾಗಿ ಹೇಳಬಲ್ಲೆ: ನಾಳೆಯೇ ಚುನಾವಣೆ ಘೋಷಣೆಯಾದರೂ, ಡಿ.ಕೆ. ಶಿವಕುಮಾರ್ ಅವರ ಸಂಪುಟದ ಸಚಿವರು ಸೇರಿದಂತೆ 25 ಶಾಸಕರು ಬಿಜೆಪಿ ಸೇರಲಿದ್ದಾರೆ. ಅಂತಹ ವಾತಾವರಣ ಈಗಾಗಲೇ ನಿರ್ಮಾಣವಾಗಿದೆ" ಎಂದು ಬಿವೈ ವಿ ಸುದ್ದಿಗಾರರಿಗೆ ತಿಳಿಸಿದರು.





**ಡಿಕೆ ಶಿವಕುಮಾರ್ ತೀಕ್ಷ್ಣ ಪ್ರತಿಕ್ರಿಯೆ:** ಇನ್ನು ಬಿಜೆಪಿ ರಾಜ್ಯಾಧ್ಯಕ್ಷರ ಹೇಳಿಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಡಿಕೆ ಶಿವಕುಮಾರ್, "ಬಿಜೆಪಿ ಸೇರಲು ಸಿದ್ಧವಾಗಿರುವ ಕಾಂಗ್ರೆಸ್ ಶಾಸಕರನ್ನು ಯಾವುದೇ ವಿಳಂಬ ಮಾಡದೇ ಬಿವೈ ವಿಜಯೇಂದ್ರ ಅವರು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲಿ" ಎಂದು ಹೇಳಿದ್ದಾರೆ. "ನಮ್ಮ ಪಕ್ಷದ ಶಾಸಕರು ಮತ್ತು ನಾಯಕರು ಬಿಜೆಪಿ ಸೇರುತ್ತಾರೆ ಎಂದರೆ, ಆ ಪಕ್ಷದ ರಾಜ್ಯಾಧ್ಯಕ್ಷರಾದ ಬಿವೈ ವಿಜಯೇಂದ್ರ ತಡ ಮಾಡಬಾರದು. ಕೂಡಲೇ ಅವರೆಲ್ಲರನ್ನೂ ತಮ್ಮ ಪಕ್ಕ ಕೂರಿಸಿಕೊಂಡು, ತಮ್ಮ ಪಕ್ಷವನ್ನು ಬಲಪಡಿಸಿಕೊಳ್ಳಬೇಕು" ಎಂದು ಸಿಎಂ ಡಿಕೆ ಶಿವಕುಮಾರ್ ಅವರು ವ್ಯಂಗ್ಯದ ಧಾಟಿಯಲ್ಲಿ ಪ್ರತಿಕ್ರಿಯೆ ನೀಡಿದರು.

ಅದೇ ರೀತಿ ರಾಜ್ಯಸಭಾ ಚುನಾವಣೆಯಲ್ಲಿ ನಡೆದ ಅಡ್ಡಮತದಾನದ ವಿಷಯವಾಗಿಯೂ, ಸಿಎಂ ಡಿಕೆಶಿ ಅವರು ಬಿಜೆಪಿ ಮತ್ತು ಜೆಡಿಎಸ್ ವಿರುದ್ಧ ವಾಗ್ದಾಳಿ ನಡೆಸಿದರು. "ಯಾರು ಅಡ್ಡಮತದಾನ ಮಾಡಿದರು ಎಂಬುದನ್ನು ಕುಮಾರಸ್ವಾಮಿ ಅಥವಾ ವಿಜಯೇಂದ್ರ ಇಬ್ಬರಿಗೂ ಹೇಳಲು ಸಾಧ್ಯವಾಗಲಿಲ್ಲ. ಅವರ ಪಕ್ಷದ ನಾಯಕರೇ ಕಾಂಗ್ರೆಸ್ ಪರವಾಗಿ ಅಡ್ಡಮತದಾನ ಮಾಡಿದರು. ಅವರಿಗಿನ್ನೇನು ಬೇಕು?" ಎಂದು ಮುಖ್ಯಮಂತ್ರಿಗಳು ಪ್ರಶ್ನಿಸಿದರು.

# ಕಾವೇರಿ ನದಿಯಲ್ಲಿ ನೀರಿಲ್ಲದಿದ್ದರೆ ಹೇಗೆ ಹರಿಸುವುದು

### ತಮಿಳುನಾಡಿನ ಬೇಡಿಕೆಯನ್ನು ಈಡೇರಿಸುವುದು ಕಷ್ಟಸಾಧ್ಯ | ತಮಿಳುನಾಡು ಪರ ವಕೀಲರ ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್

ದೆಹಲಿ: ಈ ವರ್ಷ ತೀವ್ರ ಮಳೆ ಕೊರತೆ ಎದುರಾಗಿದ್ದು, ರಾಜ್ಯದ ಹಲವು ಪ್ರದೇಶಗಳನ್ನು ಬರಪೀಡಿತ ಎಂದು ಘೋಷಿಸಿರುವುದರಿಂದ 11 ಟಿಎಂಸಿ ಕಾವೇರಿ ನೀರು ಹರಿಸಬೇಕೆಂಬ ತಮಿಳುನಾಡಿನ ಬೇಡಿಕೆಯನ್ನು ಈಡೇರಿಸುವುದು ಕಷ್ಟಸಾಧ್ಯ ಎಂದು ಕರ್ನಾಟಕ ಸರಕಾರ ಸೋಮವಾರ ಸುಪ್ರೀಂ ಕೋರ್ಟ್‌ಗೆ ಸ್ಪಷ್ಟಪಡಿಸಿದೆ.

ಇದೇ ವೇಳೆ, "ಈ ವರ್ಷ ಮಳೆ ಕೊರತೆ ಇದ್ದು, ರಾಜ್ಯ ಸಂಕಷ್ಟದಲ್ಲಿದೆ. ಹೀಗಿರುವಾಗ ಬಾಕಿ ನೀರನ್ನು ಹರಿಸಲು ಹೇಗೆ ಸಾಧ್ಯ? ಇದೊಂದು ಸಾಮಾನ್ಯ ವರ್ಷವಾಗಿದ್ದರೆ ಪರಿಸ್ಥಿತಿಯೇ ಬೇರೆಯಿರುತ್ತಿತ್ತು," ಎಂದು ಸುಪ್ರೀಂ ಕೋರ್ಟ್ ಹೇಳಿದ್ದು, ತಮಿಳುನಾಡು ಪರ ವಕೀಲರನ್ನು ತರಾಟೆಗೆ ತೆಗೆದುಕೊಂಡಿದೆ.

"ಅ.7 ರವರೆಗಿನ 11 ಟಿಎಂಸಿ ಬಾಕಿ ನೀರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಕರ್ನಾಟಕ–ತಮಿಳುನಾಡು ಗಡಿಯ ಬಿಳಿಗುಂಡ್ಲುಮಾಪನ ಕೇಂದ್ರದಲ್ಲಿ ಮುಂದಿನ 10 ದಿನಗಳ ಕಾಲ ನಿತ್ಯ 1.3 ಟಿಎಂಸಿ ನೀರು ಹರಿಸುವಂತೆ ಕರ್ನಾಟಕಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ತಮಿಳುನಾಡು ಹೊಸದಾಗಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಮತ್ತು ಅಪರೇಶ್ ಕುಮಾರ್‌ಸಿಂಗ್ ಅವರಿದ್ದ ಪೀಠವು ಸೋಮವಾರ ಕೈಗೆತ್ತಿಕೊಂಡಿತು.



"ಸಂಕಷ್ಟದ ಸಮಯದಲಿ ್ಲನಮಗೆ ಸಲ್ಲಬೇಕಾದ ನ್ಯಾಯಯುತ ಪಾಲಿನ ನೀರು ಹಾಗೂ ಹಿಂದಿನ ಬಾಕಿ ನೀರನ್ನು ಮಾತ್ರ ಕೇಳುತ್ತಿದ್ದೇವೆ. ನೀರಿನ ಕೊರತೆಯ ಸಂಪೂರ್ಣ ಹೊರೆಯನ್ನು ಕೆಳ ಹರಿವಿನ ರಾಜ್ಯದ ಮೇಲೆ ಹಾಕಬಾರದು. ಕರ್ನಾಟಕವು ತನ್ನ ನೀರಾವರಿ ಹಾಗೂ ಇತರ ಅಗತ್ಯಗಳಿಗಾಗಿ ಲಭ್ಯವಿರುವ ನೀರನ್ನು ಬಳಸಿಕೊಳ್ಳುತ್ತಿದೆ," ಎಂದು ತಮಿಳುನಾಡು ವಾದಿಸಿತು.

**ರೈತರಿಂದ ಆಕ್ರೋಶ:** ಬರದಲ್ಲೂ ಭರ್ತಿಯಾಗಿ ಭರವಸೆ ಮೂಡಿಸಿದ್ದ ಆಲಮಟ್ಟಿ ಜಲಾಶಯದಿಂದ ನಾಲ್ಕು ದಿನಗಳಿಂದ ತೆಲಂಗಾಣಕ್ಕೆ ಸದ್ದಿಲ್ಲದೇ ಕೃಷ್ಣಾನದಿ ನೀರು ಹರಿಸುತ್ತಿರುವ ರಾಜ್ಯ ಸರಕಾರದ ಕ್ರಮಕ್ಕೆ ಈ ಭಾಗದ ರೈತರಿಂದ ಆಕ್ರೋಶ ವ್ಯಕ್ತವಾಗಿದೆ. ತೆಲಂಗಾಣದ ಸಚಿವರ ನಿಯೋಗ ಸೆ.22 ರಂದು ಬೆಂಗಳೂರಿನಲ್ಲಿ ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಯಾಗಿ 1 ತಿಂಗಳ ಕಾಲ ನಿತ್ಯ 5,000 ಕ್ಯುಸೆಕ್ ಕೃಷ್ಣಾ ನೀರು ಹರಿಸುವಂತೆ ಮನವಿ ಮಾಡಿತ್ತು. ಹೀಗಾಗಿ ಕಳೆದ ಆಲಮಟ್ಟಿಯಿಂದ ಶುಕ್ರವಾರದಿಂದ ನಾರಾಯಣಪುರ ಡ್ಯಾಂಗೆ ಪ್ರತಿದಿನ 2,500–5,000 ಕ್ಯುಸೆಕ್ ನೀರು ಹರಿಸಿ, ಅಲ್ಲಿಂದ ತೆಲಂಗಾಣಕ್ಕೆ ನೀರು ಬಿಡಲಾಗುತ್ತಿದೆ. ಈವರೆಗೆ 2 ಟಿಎಂಸಿ ನೀರು ಹರಿಸಿದ ಮಾಹಿತಿ ಇದೆ.



ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ

UTTARA KARNATKA SUDDIGALU
Kannada Daily Morning


ಸುವರ್ಣಾ ರೋಣ


ವಿಜಯಲಕ್ಷ್ಮಿ ಕರಡಿಮಠ ಗಂಗಾವತಿ


ಬಸವೇಶ್ವರ ಮಹಿಳಾ ಮಂಡಳಿ, ಶಿವಾನಂದ ನಗರ ರೋಣ


ಲಲಿತಾ ಹಾಗೂ ಸೌಮ್ಯ ಗದಗ


ಭಾಗ್ಯಶ್ರೀ, ಆರಾಧ್ಯ, ಶಲವಡಿ


ಜಿಲ್ಲಾ ಆಸ್ಪತ್ರೆ ಸಿಬ್ಬಂದಿ ಬಾಗಲಕೋಟೆ


ಹುಬ್ಬಳ್ಳಿಯ ಶಿವಾನಂದ ನಗರದ ಈಶ್ವರ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ನವನಗರದ ರುದ್ರ ಬಳಗದವರಿಂದ ರುದ್ರ ಪಠಣ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಜಾಗೃತಿ ಮಹಿಳಾ ಮಂಡಲದ ಸದಸ್ಯರು ಹಾಗೂ ಸುತ್ತಮುತ್ತಲಿನ ಸಾರ್ವಜನಿಕರು ಹಾಗೂ ಮಕ್ಕಳು ಪಾಲ್ಗೊಂಡಿದ್ದರು.


ಶಕುಂತಲಾ ಬೆಂಗಳೂರು


ಶ್ರೀಷಾ ಪ್ರಭನ್ನವರ ಬಾಗಲಕೋಟ


ಚೈತ್ರಾ. ವೀರೇಶ್.ಕೊಪ್ಪಳ


ಸುಮಾ ಹಿರೇಮಠ


ಶೋಭಾ ಸುಂಕದ ಹುಬ್ಬಳ್ಳಿ


ಎಂ.ಟಿ. ಅವಧೂತ ಗಜೇಂದ್ರಗಡ


ಸಹನಾ ಹಿರೇಮಠ ಗಂಗಾವತಿ


ಗೌರಿ ಬಸಾಪಟ್ಟಣ, ಗಂಗಾವತಿ


ಅಂಗನವಾಡಿ ಕಾರ್ಯಕರ್ತೆಯರು ಬನಹಟ್ಟಿ


ಎಂ.ಎಸ್.ಎಂ.ಎಸ್.ಕಾನೂನು ಸ್ನೇಹಿತರು ಬಳಗ ಮರಳ ಗಂಗಾವತಿ


ದ್ಯಾಮವ್ವ ದೇವಿ ದೇವಸ್ಥಾನ, ಹುಲಕೋಟಿ


ಶ್ರುತಿ, ಗೀತಾ ಮುಂಡರಗಿ


ಜಯಶ್ರೀ ಸಂಗಡಿಗಳು ರೋಣ


ಲಲಿತಾ ಸಂಗಡಿಗರು ಗದಗ


ರೂಪ ಮತ್ತು ಸಂಗಡಿಗರು ಲಕ್ಷ್ಮೇಶ್ವರ

UTTARA KARNATKA SUDDIGALU
Kannada Daily Morning

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ

ಬುಧವಾರ 14 ಅಕ್ಟೋಬರ್ 2026
14 OCTOBER 2026



# 1996ರಲ್ಲಿ ರಾಜಕೀಯ ಸಂಚಲನ ಸೃಷ್ಟಿಸಿದ್ದ ಗೌಸಿಯಾ ಬೇಗಂ ಇನ್ನಿಲ್ಲ

## ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದು ನಗರಸಭೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಮಾಜಿ ಸದಸ್ಯೆ ನಿಧನ



**ಗಂಗಾವತಿ:** ಗಂಗಾವತಿ ನಗರಸಭೆಯ ರಾಜಕೀಯ ಇತಿಹಾಸದಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಮಾಜಿ ನಗರಸಭೆ ಸದಸ್ಯೆ ಶ್ರೀಮತಿ ಗೌಸಿಯಾ ಬೇಗಂ ಅವರು ತಡರಾತ್ರಿ ನಿಧನರಾದರು.

1996ರ ನಗರಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪ್ರಾಬಲ್ಯವಿದ್ದ ಸಂದರ್ಭದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದಿದ್ದ ಗೌಸಿಯಾ ಬೇಗಂ ಅವರು ಪ್ರಭಾವಿ ಅಭ್ಯರ್ಥಿಗಳನ್ನು ಎದುರಿಸಿ ಗೆಲುವು ಸಾಧಿಸಿದ್ದರು. ಅವರ ಗೆಲುವು ಅಂದಿನ ಸ್ಥಳೀಯ ರಾಜಕೀಯ ವಲಯದಲ್ಲಿ ಗಮನಾರ್ಹ ಬೆಳವಣಿಗೆಯಾಗಿತ್ತು. ಚುನಾವಣೆಯ ಬಳಿಕ ನಗರಸಭೆಯಲ್ಲಿ ಅಧಿಕಾರ ರಚನೆ ಸಂದರ್ಭದಲ್ಲಿ ಅವರ ಬೆಂಬಲಕ್ಕೆ ಮಹತ್ವ ದೊರೆತಿತ್ತು. ಜನತಾದಳದ ಪ್ರಮುಖ ಮುಖಂಡ ಗುಂಜಳ್ಳಿ ರಾಜಶೇಖರಪ್ಪ ಸೇರಿದಂತೆ ಹಲವು ಪ್ರಮುಖ ನಾಯಕರು ನಗರಸಭೆಯ ಅಧಿಕಾರದ ಗದ್ದುಗೆ ಹಿಡಿಯಲು ಅವರ ಬೆಂಬಲ ಕೋರಿದ್ದರು ಎನ್ನಲಾಗಿದೆ. ಬಳಿಕ ಗೌಸಿಯಾ ಬೇಗಂ ಅವರು ನಗರಸಭೆಯ ಪ್ರಭಾವಿ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.

ಸ್ಥಳೀಯ ರಾಜಕಾರಣದಲ್ಲಿ ಮಹಿಳೆಯಾಗಿ ಧೈರ್ಯದಿಂದ ಹೆಜ್ಜೆ ಇಟ್ಟು, ನಗರಸಭೆಯ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಗೌಸಿಯಾ ಬೇಗಂ ಅವರ ನಿಧನದಿಂದ ನಗರದ ರಾಜಕೀಯ ಹಾಗೂ ಸಾರ್ವಜನಿಕವಲಯದಲ್ಲಿಶೋಕದವಾತಾವರಣ ನಿರ್ಮಾಣವಾಗಿದೆ. ಅವರ ನಿಧನಕ್ಕೆ ನಗರಸಭೆ ಮಾಜಿ ಅಧ್ಯಕ್ಷ ಹಾಗೂ ಮಾಜಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಾಮೀದ್ ಮನಿಯಾರ್ ಸೇರಿದಂತೆ ನಗರದ ವಿವಿಧ ರಾಜಕೀಯ ಮುಖಂಡರು, ಗಣ್ಯರು ಹಾಗೂ ಸಾರ್ವಜನಿಕರು ಸಂತಾಪ ಸೂಚಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದ್ದಾರೆ.

# ಪ್ರಜಾಪ್ರಭುತ್ವ ಪರಿಕಲ್ಪನೆಗೆ ಬಸವಣ್ಣನ ಅನುಭವ ಮಂಟಪವೇ ಪ್ರೇರಣೆ

## ಕುಷ್ಟಗಿಯಲ್ಲಿ ಯುವ ಸಂಸತ್ತು ಕಾರ್ಯಕ್ರಮಕ್ಕೆ ಚಾಲನೆ ನೀಡಿದ ನ್ಯಾಯಾಧೀಶ ಎಂ.ಎಲ್. ಪೂಜೇರಿ, ವಿದ್ಯಾರ್ಥಿಗಳಿಂದ ಕಲಾಪ–ಚರ್ಚೆ



**ಕುಷ್ಟಗಿ:** ಪ್ರಜಾಪ್ರಭುತ್ವದ ಪರಿಕಲ್ಪನೆಗೆ ಬಸವಣ್ಣನವರ ಅನುಭವ ಮಂಟಪವೇ ಪ್ರೇರಣೆಯಾಗಿದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶ ಎಂ.ಎಲ್. ಪೂಜೇರಿ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಭಾಂಗಣದಲ್ಲಿ ತಾಲೂಕು ಆಡಳಿತ, ತಾಪಂ, ಸಮಾಜ ಕಲ್ಯಾಣ ಇಲಾಖೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಉನತ ಶಿಕ್ಷಣ ಇಲಾಖೆ ಹಾಗೂ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆಯ ಸಂಯುಕ್ತಾಶ್ರಯದಲ್ಲಿ ರುದಲ್ಲಿಹಮ್ಮಿಕೊಂಡಿದ್ದತಾಲೂಕುಮಟ್ಟದಯುವಸಂಸತ್ ಕಾರ್ಯಕ್ರಮ ಉದ್ಘಾಟಿಸಿಮಾತನಾಡಿದರು. ಅಂದಿನ ಅನುಭವ ಮಂಟಪದಲ್ಲಿ ಲಿಂಗ ಸಮಾನತೆ, ಜಾತಿ ಅಸಮಾನತೆ ಸೇರಿದಂತೆ ಸಾಮಾಜಿಕ ಸಮಸ್ಯೆಗಳ ಕುರಿತು ಮುಕ್ತ ಚರ್ಚೆ ನಡೆಯುತ್ತಿತ್ತು. ಅದೇ ರೀತಿ ಸಂಸತ್ತಿನಲ್ಲಿ ದೇಶದ ಅಭಿವೃದ್ಧಿ, ಜನರ ಹಿತಾಸಕ್ತಿ ಹಾಗೂ ಸಮಸ್ಯೆಗಳ ಪರಿಹಾರಕ್ಕೆ ಪೂರಕವಾದ ಕಾನೂನುಗಳನ್ನು ರೂಪಿಸಲಾಗುತ್ತದೆ ಎಂದು ತಿಳಿಸಿದರು.

ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಅದರ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿ, ಜವಾಬ್ದಾರಿಯುತ ಪ್ರಜೆಗಳನ್ನಾಗಿ ರೂಪಿಸುವ ಉದ್ದೇಶದಿಂದ ಯುವ ಸಂಸತ್ತು ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ಬರಗಾಲ ಪೀಡಿತ ಪ್ರದೇಶಗಳಲ್ಲಿ ರೈತರ ಸಾಲ ವಸೂಲಾತಿಗೆ ಬ್ಯಾಂಕುಗಳು ಒತ್ತಡ ಹೇರದಂತೆ ಸರ್ಕಾರ ಕ್ರಮ ಕೈಗೊಳ್ಳುವುದು ಜನಪರ ಆಡಳಿತಕ್ಕೆ ಉದಾಹರಣೆಯಾಗಿದೆ. ಉತ್ತಮ ಸಂಸದೀಯ ಪಟುವಾಗಲು ಸಕಾರಾತ್ಮಕ ವಿಚಾರಗಳನ್ನು ಬೆಂಬಲಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಜನರ ಸಮಸ್ಯೆಗಳಿಗೆ ಸ್ಪಂದಿಸುವ ಗುಣ ಹೊಂದಬೇಕು ಎಂದು ಸಲಹೆ ನೀಡಿದರು.

ಸಂಸದೀಯ ತಾಪಂ ಇಒ ಅಮರೇಶ ಯಾದವ್ ಮಾತನಾಡಿ, ಕಲಾಪಗಳ ಮಹತ್ವ ಮತ್ತು ಕಾರ್ಯವೈಖರಿಯನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ತುಗ್ಲೆಪ್ಪ ದೇಸಾಯಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದೈಹಿಕ ಶಿಕ್ಷಣ ಅಧಿಕಾರಿ ನಾಗಪ್ಪ ಬಿಳಿಯಪ್ಪ ಸಂವಿಧಾನದ ಪೀಠಿಕೆ ಬೋಧಿಸಿದರು. ಗ್ರೇಡ್–2 ತಹಸೀಲ್ದಾರ್‌ರಜನಿಕಾಂತ್ ಕೆಂಗೇರಿ, ಪರಿಶಿಷ್ಟ ಇಲಾಖೆಯ ಅಧಿಕಾರಿ ವೀರಪ್ಪ, ಯಮನಪ್ಪ ಚೂರಿ, ರಾಘಪ್ಪ, ಪುರಸಭೆ ಮುಖ್ಯಾಧಿಕಾರಿ ವೆಂಕಪ್ಪ ಬೀಳಗಿ, ವಕೀಲರ ಸಂಘದ ಅಧ್ಯಕ್ಷ ಎಚ್.ಆರ್. ನಾಯಕ, ಜೀವನಸಾಬ ಬಿನ್ನಾಳ, ಕಿಶನರಾವ್ ಕುಲಕರ್ಣಿ, ಶರಣಪ್ಪ ನಿಡಶೇಸಿ ಉಪಸ್ಥಿತರಿದ್ದರು.

# ತಾ.ಪಂ., ಜಿ.ಪಂ. ಮೀಸಲಾತಿ ಪರಿಶೀಲಿಸಿ



**ಗದಗ:** ತಾಲೂಕ ಪಂಚಾಯ್ತಿ ಮತ್ತು ಜಿಲ್ಲಾ ಪಂಚಾಯ್ತಿ ಮೀಸಲಾತಿಯನ್ನು ಪುನಃ ಪರಿಶೀಲಿಸಬೇಕೆಂದು ರಾಜ್ಯ ಎಸ್‌ಸಿ.ಎಸ್‌ಟಿ ನಕಲಿಜಾತಿ ಪ್ರಮಾಣ ಪತ್ರ ತಡೆ ಸಮಿತಿ ಗದಗ ಜಿಲ್ಲಾಧ್ಯಕ್ಷ ಶ್ರೀಕಾಂತ ಪೂಜಾರ ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು 2026ರಲ್ಲಿನಡೆಯಲಿರುವ ಗದಗ ತಾಲೂಕು ಪಂಚಾಯಿತಿ ಚುನಾವಣೆಗೆ ಸಂಬಂಧಿಸಿದಂತೆ ಕರಡು ಮೀಸಲಾತಿ ಪಟ್ಟಿ ಪ್ರಕಟಿಸಲಾಗಿದೆ. ಅದರಲ್ಲಿ ಗದಗ ತಾಲೂಕಿನಲ್ಲಿ ಪರಿಶಿಷ್ಟ ಪಂಗಡಕ್ಕೆ (ಖಖ) ಮೀಸಲಾಗಿರುವ 7 ಕ್ಷೇತ್ರಗಳನ್ನೂ ಸಹ ಮಹಿಳೆಯರಿಗೆ (ST Women) ಎಂದು ಮೀಸಲಾತಿ ನೀಡಲಾಗಿದೆ ಎಂದು ತಿಳಿದು ಬಂದಿದೆ.

ಇದರಿಂದ ಪುರುಷ ಸಮಾಜ ಸೇವಕರಿಗೆ, ಕಾರ್ಯಕರ್ತರು, ಮುಖಂಡರು ಚುನಾವಣೆಗೆ ಸ್ಪರ್ಧಿಸಲು ಅವಕಾಶವಿಲ್ಲದಂತಾಗಿದೆ.

ಆದ ಕಾರಣ ನಮ್ಮ ಬೇಡಿಕೆಯಂತೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕಾರ ಮೀಸಲಾತಿ ನಿಗದಿಪಡಿಸುವಾಗ ಚಕ್ರಾನುಕ್ರಮ (Rotation System) ಪಾಲಿಸಬೇಕು. ಒಂದು ಬಾರಿ ಮಹಿಳೆಗೆ ಮೀಸಲು ನೀಡಿದ ಕ್ಷೇತ್ರವನ್ನು ಮುಂದಿನ ಚುನಾವಣೆಯಲ್ಲಿ ಸಾಮಾನ್ಯ ST (ಪುರುಷ) ಗೆ ನೀಡಬೇಕು.

ಆದರೆ ಈ ಬಾರಿ ಎಲ್ಲಾ 7 ಕ್ಷೇತ್ರಗಳನ್ನು ST ಮಹಿಳೆಗೆ ನೀಡಿರುವುದು ಈ ನಿಯಮಕ್ಕೆ ವಿರುದ್ಧವಾಗಿದೆ. ಇದರಿಂದ ಖಖ ಪುರುಷರಿಗೆ ರಾಜಕೀಯವಾಗಿ ಅನ್ಯಾಯವಾಗುತ್ತಿದೆ. ಆದಕಾರಣ

ಗದಗ ತಾಲೂಕಿನ 7 ST ಮೀಸಲು ಕ್ಷೇತ್ರಗಳ ಮೀಸಲಾತಿ ಪಟ್ಟಿಯನ್ನು ಪುನಃ ಪರಿಶೀಲಿಸಿ ಕನಿಷ್ಠ 3–4 ಕ್ಷೇತ್ರಗಳನ್ನು ಖಖ (ಸಾಮಾನ್ಯ) – ಪುರುಷರಿಗೆ ಮತ್ತು ಉಳಿದ ಕ್ಷೇತ್ರಗಳನ್ನು ST ಮಹಿಳೆಗೆ ಎಂದು ಹಂಚಿಕೆ ಮಾಡಿ, ಇಬ್ಬರಿಗೂ ಸಮಾನ ಅವಕಾಶ ಕಲ್ಪಿಸಬೇಕೆಂದರು.

ತಾವು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ನಮ್ಮ ST ಪುರುಷ ಅಭ್ಯರ್ಥಿಗಳಿಗೂ ನ್ಯಾಯ ಒದಗಿಸಬೇಕೆಂದು ಪ್ರಕಟಣೆ ಮೂಲಕ ಒತ್ತಾಯಿಸಿದ್ದಾರೆ .

# ರೈತ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಿ: ವೆಂಕನಗೌಡ ಗೋವಿಂದಗೌಡ್ರ ಆಗ್ರಹ

## ಕುಮಾರಸ್ವಾಮಿ ಸೂಚನೆ ಮೇರೆಗೆ ಮೃತ ರೈತನ ಮನೆಗೆ ಭೇಟಿ, ಕುಟುಂಬಕ್ಕೆ ಸಾಂತ್ವನ



**ಗಜೇಂದ್ರಗಡ:** ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡ ತಾಲೂಕಿನ ಲಕ್ಕಲಕಟ್ಟಿ ಗ್ರಾಮದ ರೈತ ಸಂಗಯ್ಯ ಕಳಕಯ್ಯ ಹಿರೇಮಠ ಅವರ ಕುಟುಂಬಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ಸೂಚನೆ ಮೇರೆಗೆ ಗದಗ ಜಿಲ್ಲಾ ಜೆಡಿಎಸ್ ವಕ್ತಾರ ವೆಂಕನಗೌಡ ಗೋವಿಂದಗೌಡ್ರ ಭೇಟಿ ನೀಡಿ ಸಾಂತ್ವನ ಹೇಳಿದರು.

ಬಳಿಕ ಮಾತನಾಡಿದ ಅವರು, ರೈತರು ಆತ್ಮಹತ್ಯೆಯಂತಹ ನಿರ್ಧಾರಕ್ಕೆ ಮುಂದಾಗಬಾರದು. ಯಾವುದೇ ಸಂಕಷ್ಟವಿದ್ದರೂ ಧೈರ್ಯದಿಂದ ಎದುರಿಸಿ. ನಿಮ್ಮೊಂದಿಗೆ ನಾವಿದ್ದೇವೆ ಎಂಬ ಭರವಸೆಯನ್ನು ರೈತರಿಗೆ ನೀಡಬೇಕಿದೆ. ಆದರೆ, ರಾಜ್ಯ ಸರ್ಕಾರ ರೈತರ ಕಣ್ಣೀರು ಒರೆಸುವ ಬದಲು ಬೇರೆ ಕಾರ್ಯಗಳಲ್ಲಿ ತೊಡಗಿರುವುದು ದುರದೃಷ್ಟಕರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣಗಳು ಹಾಗೂ ಗದಗದ ಎಇಇ ಪರ್ವೀಜ್ ನಾಪತ್ತೆ ಪ್ರಕರಣದಂತಹ ಗಂಭೀರ ವಿಚಾರಗಳ ನಡುವೆಯೂ ಸರ್ಕಾರ ಕಾಲಹರಣ ಮಾಡುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವರು ಒಮ್ಮೆ ಭೇಟಿ ನೀಡಿ ಹೋದ ಬಳಿಕ ಈ ಭಾಗದ ಸಮಸ್ಯೆಗಳತ್ತ ಗಮನಹರಿಸಿಲ್ಲ. ಮೃತ ರೈತನ ಕುಟುಂಬಕ್ಕೆ ಜನಪ್ರತಿನಿಧಿಗಳಾಗಲಿ, ಅಧಿಕಾರಿಗಳಾಗಲಿ ಭೇಟಿ ನೀಡಿ ಸಾಂತ್ವನ ಹೇಳದಿರುವುದು ನೋವಿನ ಸಂಗತಿ ಎಂದರು. ರೈತರಿಗೆ ಎಕರೆಗೆ ಕೇವಲ 2,500 ಪರಿಹಾರ ನೀಡುತ್ತಿರುವುದು ದುರದೃಷ್ಟಕರ. ಮೃತ ರೈತನ ಕುಟುಂಬಕ್ಕೆ 25 ಲಕ್ಷ ಪರಿಹಾರ ನೀಡಬೇಕು. ರೈತನ ಸಂಪೂರ್ಣ ಸಾಲ ಮನ್ನಾ ಮಾಡಬೇಕು ಹಾಗೂ ಅವರ ಮಕ್ಕಳಿಗೆ ಉಚಿತ ಶಿಕ್ಷಣ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಕೇಂದ್ರ ಸರ್ಕಾರದ ಹೆಸರಿನಲ್ಲಿ ರಾಜ್ಯ ಸರ್ಕಾರ ಕಾಲಹರಣ ಮಾಡುತ್ತಿದೆ. ಈ ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗ ರೈತರ ಸಾಲ ಮನ್ನಾ ಮಾಡಿದ್ದರು. ಆಗ ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಪಡೆಯದೆ ರೈತರ ಸಾಲ ಮನ್ನಾ ಮಾಡಲಾಗಿತ್ತು. ಹೀಗಿರುವಾಗ, ರಾಜ್ಯ ಸರ್ಕಾರ ರೈತರ ನೆರವಿಗೆ ಧಾವಿಸದೆ ನೆಪಗಳನ್ನು ಹೇಳುತ್ತಿರುವುದು ಸರಿಯಲ್ಲ ಎಂದು ಟೀಕಿಸಿದರು.

ಎಚ್.ಡಿ. ಕುಮಾರಸ್ವಾಮಿ ಅವರ ಸೂಚನೆಯಂತೆ ಮೃತ ರೈತನ ಮನೆಗೆ ಭೇಟಿ ನೀಡಿ ಕುಟುಂಬದವರಿಗೆ ಧೈರ್ಯ ತುಂಬಲಾಗಿದೆ. ರೈತರ ಸಂಕಷ್ಟಗಳಿಗೆ ಸರ್ಕಾರ ತಕ್ಷಣ ಸ್ಪಂದಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶ್ರೀಧರ ಚುಂಚಾ, ಬಸವರಾಜ ಹೂಗಾರ, ರಾಜು ನಾಯಕ, ಕಳಕಪ್ಪ ಚೀಲಜೇರಿ, ಆನಂದ ಸೂಡಿ, ಕಳಕುಶಾ ಶಿಂಗ್ರಿ ಹಾಗೂ ನಾಗರಾಜ ಮುಶಿಗೇರಿ ಇದ್ದರು.

# ಹೈಕಮಾಂಡ್ ಭರವಸೆಯಿಂದ ನಾಮಪತ್ರ ವಾಪಸ್

**ಹಾವೇರಿ:** ಕಾಂಗ್ರೆಸ್ ಪಕ್ಷದ ಹೈಕಮಾಂಡ್ ನಾಯಕರು ಸೂಕ್ತ ಸ್ಥಾನಮಾನ ನೀಡುವ ಭರವಸೆ ನೀಡಿದ್ದರಿಂದ ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆಯಿಂದ ನಾಮಪತ್ರ ಹಿಂಪಡೆದಿದ್ದು, ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಅವರ ಗೆಲುವಿಗೆ ಶ್ರಮಿಸುತ್ತೇನೆ ಎಂದು ಕೆಪಿಸಿಸಿ ಪದವೀಧರ ಘಟಕದ ನಿಕಟಪೂರ್ವ ರಾಜ್ಯಾಧ್ಯಕ್ಷ ಡಾ. ಆರ್.ಎಂ. ಕುಬೇರಪ್ಪ ತಿಳಿಸಿದರು.



ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದಿನ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರು ಮನೆಗೆ ಭೇಟಿ ನೀಡಿ, ಉತ್ತಮ ಸ್ಥಾನಮಾನ ನೀಡುವ ಕುರಿತು ಮನವರಿಕೆ ಮಾಡಿದ್ದರು. ಬಳಿಕ ಸಿಎಂ ಡಿ.ಕೆ. ಶಿವಕುಮಾರ ಅವರು ಬೆಂಗಳೂರಿಗೆ ಕರೆಸಿ ಮಾತನಾಡಿ, ಸೂಕ್ತ ಸ್ಥಾನಮಾನ ನೀಡುವ ಭರವಸೆ ನೀಡಿದ್ದಾರೆ. ಪಕ್ಷದೊಂದಿಗೇ ಇರುವಂತೆ ಸಂದೇಶ ನೀಡಿದ್ದಾರೆ. ಹೀಗಾಗಿ ನಾಮಪತ್ರ ಹಿಂಪಡೆದಿದ್ದೇನೆ. ಕಾಂಗ್ರೆಸ್ ಹೈಕಮಾಂಡ್ ಮೇಲೆ ನಂಬಿಕೆ ಮತ್ತು ವಿಶ್ವಾಸವಿದ್ದು, ಪಕ್ಷದ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಮೋಹನ್ ಲಿಂಬಿಕಾಯಿ ಪರ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು.

ನಗರಾಭಿವೃದ್ಧಿ ಪ್ರಾಕಾರದ ಅಧ್ಯಕ್ಷ ಪ್ರಭುಗೌಡ ಬಿಷ್ಟನಗೌಡ್ರ, ಎಂ.ಎಂ. ಮೈದೂರ, ಗುಡ್ಡನಗೌಡ ಅಂದಾನಿಗೌಡ್ರ, ಶಂಕರ ಮೆಹರವಾಡೆ, ಬಾಬುಸಾಬ್ ಮೊಮಿನಗಾರ, ಮಹಾಲಿಂಗಯ್ಯ ಪಾಟೀಲ, ರಾಧಾ ಸವಣೂರು, ಶಿವರಾಜ ಮತ್ತಿಹಳ್ಳಿ ಮತ್ತಿತರರು ಸುದ್ದಿಗೋಷ್ಠಿಯಲ್ಲಿದ್ದರು.

# ಯೋಗ–ನಿಯಮಿತ ವ್ಯಾಯಾಮ ಅಗತ್ಯ

**ಕುಷ್ಟಗಿ:** ನಿಜವಾದ ಬದಲಾವಣೆ ಮಾನಸಿಕ ಆರೋಗ್ಯ ಸ್ಥಿತಿಗಳೊಂದಿಗೆ ಬದುಕಿದ ಜನರ ಅನುಭವಗಳು ಮತ್ತು ದೃಷ್ಟಿಕೋನಗಳನ್ನು ಗುರುತಿಸುವುದರ ಮೇಲೆ ಕೇಂದ್ರೀಕರಿಸುತ್ತದೆ ಎಂದು ಹಿರಿಯ ವೈದ್ಯ ಕೆ.ಎಸ್.ರೆಡ್ಡಿ ಹೇಳಿದರು

ತಾಲೂಕು ಆಸ್ಪತ್ರೆಯಲ್ಲಿ ಆರೋಗ್ಯ ಇಲಾಖೆ, ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ವಕೀಲರ ಸಂಘದ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಮಾನಸಿಕ ಅರೋಗ್ಯ ದಿನ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಾನಸಿಕವಾಗಿ ಸದೃಢರಾಗಲು ಯೋಗ ಮತ್ತು ನಿಯಮಿತ ವ್ಯಾಯಾಮಾದ ಅಗತ್ಯವಿದ್ದು, ಇದು ದೈನಂದಿನ ಕೆಲಸದ ಒತ್ತಡ ನಿವಾರಣೆಗೆ ಪೂರಕವಾಗುತ್ತದೆ ಎಂದರು. ವೈದ್ಯಾರಾದ ಚಂದ್ರಕಲಾ, ಪ್ರಶಾಂತ್, ವಕೀಲ ಎಂ.ಬಿ.ಕೋನಸಾಗರ, ಆರೋಗ್ಯ ಇಲಾಖೆ ಸಿಬ್ಬಂದಿ ಬಾಲಾಜಿ ಬಳಿಗಾರ, ಸೋಮಶೇಖರ್ ಮೇಟಿ, ಪ್ರಕಾಶ್ ಗುತ್ತೇದಾರ್, ಶಂಕ್ರಮ್ಮ, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಇದ್ದರು.



# ಎಸ್.ವಿ. ಸಂಕನೂರ ಗೆಲುವು ಖಚಿತ

## ಬೆಳವಣಕಿಯಲ್ಲಿ ಪ್ರಚಾರ ಸಭೆ | ಶಾಸಕ ಸಿ.ಸಿ. ಪಾಟೀಲ ಹೇಳಿಕೆ



**ರೋಣ:** ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ವಿ. ಸಂಕನೂರು ಅವರು ಎರಡು ಬಾರಿ ಆಯ್ಕೆಯಾಗಿದ್ದು, ಈ ಬಾರಿ ಮತ್ತೆ ಪರಿಷತ್ ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ನಾಲ್ಕು ಜಿಲ್ಲೆಗಳ ಎಲ್ಲ ತಾಲೂಕುಗಳಲ್ಲಿಯೂ ಅವರಿಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಈ ಬಾರಿಯೂ ಗೆಲುವು ಸಾಧಿಸುವ ವಿಶ್ವಾಸವಿದೆ ಎಂದು ಮಾಜಿ ಸಚಿವ, ಶಾಸಕ ಸಿ.ಸಿ. ಪಾಟೀಲ ಹೇಳಿದರು.

ತಾಲೂಕಿನ ಬೆಳವಣಕಿ ಗ್ರಾಮದ ಶ್ರೀ ವಾಸವಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಚುನಾವಣೆ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ಬಿಜೆಪಿ ಪಕ್ಷಕ್ಕಿಂತ ಜನರ ಕೆಲಸ ಮುಖ್ಯವಾದದು. ಹೀಗಾಗಿ ಪಕ್ಷಬೇಧ ಮರೆತು ಜನಪರ ಕೆಲಸ ಮಾಡುವ ಹುಮ್ಮಸ್ಸು ಎಸ್.ವಿ. ಸಂಕನೂರ ಅವರಿಗಿದೆ ಎಂದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜಗೌಡ ಪಾಟೀಲ ಮಾತನಾಡಿ, ಕಳೆದ ಎರಡು ಅವಧಿಯಲ್ಲಿ ಪದವೀಧರ ಹಾಗೂ ಶಿಕ್ಷಕರ ಸಮಸ್ಯೆಗೆ ಧ್ವನಿಯಾಗಿದ್ದಾರೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರ ಕೊರತೆ ಅಪಾರವಾಗಿತ್ತು. ಅದನ್ನು ಸರ್ಕಾರದ ಗಮನಕ್ಕೆ ತಂದು ವಿವಿಯಲ್ಲಿನ ಪ್ರಾಧ್ಯಾಪಕರ ಕೊರತೆನೀಗಿಸಿದ್ದಾರೆ ಎಂದರು. ಹೊಳೆಆಲೂರ ಮಂಡಲ ಬಿಜೆಪಿ ಅಧ್ಯಕ್ಷ ಸೋಮು ಚರೇದ ಮಾತನಾಡಿ, ಎಸ್.ವಿ. ಸಂಕನೂರ ಅವರು ಸರಳ, ಸಜ್ಜನಿಕೆ ರಾಜಕಾರಣಿ. ಬೆಳವಣಕಿ ಬೂತ್‌ನಲ್ಲಿ 400ಕ್ಕೂ ಅಧಿಕ ಮತದಾರರಿದ್ದು, ಪ್ರತಿಯೊಬ್ಬರೂ ಬಿಜೆಪಿ ಅಭ್ಯರ್ಥಿಗೆ ಮತ ನೀಡಬೇಕು. ಮತ ನೀಡುವಾಗ ಮತ ಸಿಂಧುವಾಗುವುದು ಹೇಗೆ ಎಂದು ಮತದಾರರಿಗೆ ತಿಳಿ ಹೇಳಿದರು. ಕಳೆದ ವಿಧಾನ ಪರಿಷತ್ ಚುನಾವಣೆ ವೇಳೆ ಎಂಟು ಸಾವಿರ ಮತಗಳು ಅಸಿಂಧುವಾಗಿವೆ ಎಂದು ಮಾಹಿತಿ ನೀಡಿದರು.

ಶರಣಪ್ಪ ಹದ್ಲಿ, ಸುರೇಶಗೌಡ್ರ ಪಾಟೀಲ, ಬಸವರಾಜ ಗಾಣಗೇರ, ಸೋಮು ಗಾಡಗೋಳಿ, ಮುತ್ತಣ್ಣ ಜಂಗಣ್ಣವರ ಹಾಗೂ ಮತದಾರರು ಇದ್ದರು.

# ಇಂದರಗಿಯಲ್ಲಿ 23ನೇ ವರ್ಷದ ಮಲಿಯಮ್ಮದೇವಿ–ದುರ್ಗಾದೇವಿಯ ಪುರಾಣ ಮಹಾಮಂಗಲೋತ್ಸವ

**ಗಂಗಾವತಿ:** ಸಮೀಪದ ಇಂದರಗಿ ಗ್ರಾಮದ ಶ್ರೀ ಮಲಿಯಮ್ಮ ದೇವಿ ದೇವಸ್ಥಾನದಲ್ಲಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ 23ನೇ ವರ್ಷದ ಶ್ರೀ ಮಲಿಯಮ್ಮದೇವಿ ಹಾಗೂ ಶ್ರೀ ದುರ್ಗಾದೇವಿ ಪುರಾಣ ಮಹಾಮಂಗಲೋತ್ಸವ ಹಾಗೂ ಮಹಾ ರಥೋತ್ಸವ ಕಾರ್ಯಕ್ರಮವನ್ನು ಅ.11ರಿಂದ ಅ.21ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ತಿಳಿಸಿದೆ.

ಅ.11ರಿಂದ ಅ.21ರವರೆಗೆ ಪ್ರತಿದಿನ ದೇವರಿಗೆ ವಿಶೇಷ ಪೂಜೆ, ಧಾರ್ಮಿಕ ವಿಧಿವಿಧಾನಗಳು ಹಾಗೂ ಪುರಾಣ ಪ್ರವಚನ ಸೇರಿದಂತೆ ಸಾಮೂಹಿಕ ವಿವಾಹಗಳು ಕಾರ್ಯಕ್ರಮನಡೆಯಲಿವೆ. ಈಸಂದರ್ಭದಲ್ಲಿಗ್ರಾಮದ ಹಾಗೂ ಸುತ್ತಮುತ್ತಲಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಧಾರ್ಮಿಕ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲಿದ್ದಾರೆ ಎಂದು ಸಮಿತಿ ತಿಳಿಸಿದೆ.

ಅ.21ರಂದು ಪುರಾಣ ಮಹಾಮಂಗಲೋತ್ಸವ ಹಾಗೂ ಶ್ರೀ ಶ್ರೀ ಮಲಿಯಮ್ಮದೇವಿಯ ರಥೋತ್ಸವ ವಿಜೃಂಭಣೆಯಿಂದ ಜರುಗಲಿದೆ. ರಥೋತ್ಸವದ ಅಂಗವಾಗಿ ದೇವರ ಉತ್ಸವ ಮೂರ್ತಿಗಳನ್ನು ವಿಶೇಷವಾಗಿ ಅಲಂಕರಿಸಿ, ಭಕ್ತರ ಸಮ್ಮುಖದಲ್ಲಿ ಮಂಗಳವಾದ್ಯಗಳೊಂದಿಗೆ ರಥೋತ್ಸವ ನೆರವೇರಿಸಲಾಗುವುದು ಎಂದು ದೇವಸ್ಥಾನ ಸೇವಾ ಸಮಿತಿ ತಿಳಿಸಿದೆ. ಪ್ರತಿ ವರ್ಷ ನಡೆಯುವ ಈ ಧಾರ್ಮಿಕ ಕಾರ್ಯಕ್ರಮವು ಭಕ್ತರಲ್ಲಿ ಆಧ್ಯಾತ್ಮಿಕ ಭಾವನೆ ಮೂಡಿಸುವುದರ ಜೊತೆಗೆ ಗ್ರಾಮದ ಧಾರ್ಮಿಕ ಪರಂಪರೆ ಹಾಗೂ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕಾರ್ಯಕ್ರಮದ ಸಂದರ್ಭದಲ್ಲಿ ಭಕ್ತರಿಗೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ದೇವಸ್ಥಾನ ಸೇವಾ ಸಮಿತಿ ಸಿದ್ಧತೆ ಮಾಡಿಕೊಂಡಿದೆ.

ಪುರಾಣ ಮಹಾಮಂಗಲೋತ್ಸವ ಹಾಗೂ ರಥೋತ್ಸವದಲ್ಲಿ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡು ಶ್ರೀ ಮಲಿಯಮ್ಮದೇವಿಯ ಆಶೀರ್ವಾದಕ್ಕೆ ಪಾತ್ರರಾಗಬೇಕು ಎಂದು ಶ್ರೀ ಮಲಿಯಮ್ಮದೇವಿ ದೇವಸ್ಥಾನ ಸೇವಾ ಸಮಿತಿ ಮನವಿ ಮಾಡಿದೆ.

ಉತ್ತರ ಕರ್ನಾಟಕ ಸುದ್ದಿಗಳು
ಕನ್ನಡ ದಿನ ಪತ್ರಿಕೆ
UTTARA KARNATKA SUDDIGALU
Kannada Daily Morning

# ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ

# ಪ್ರಾಶಸ್ತ್ಯ ಮತದಾನ ಮಾಡುವ ವಿಧಾನ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನವು ಪ್ರತಿಯೊಬ್ಬ ಅರ್ಹ ಮತದಾರನ ಹಕ್ಕು ಮತ್ತು ಜವಾಬ್ದಾರಿಯಾಗಿದೆ. ಮತದಾನದ ಮೂಲಕ ಸೂಕ್ತ ಪ್ರತಿನಿಧಿಯನ್ನು ಆಯ್ಕೆ ಮಾಡುವುದು ಪ್ರಜಾಪ್ರಭುತ್ವದ ಬಲವರ್ಧನೆಗೆಸಹಕಾರಿಯಾಗಿದೆ.ಈ ನಿಟ್ಟಿನಲ್ಲಿ ಕರ್ನಾಟಕ ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ದ್ವೈವಾರ್ಷಿಕ ಚುನಾವಣೆ–2026ರ ಮತದಾನವು ಅಕ್ಟೋಬರ್ 23ರಂದು ನಡೆಯಲಿದ್ದು, ಮತದಾರರು ಮತದಾನದ ವಿಧಾನ, ನಿಯಮಗಳು ಹಾಗೂ ಅಗತ್ಯ ದಾಖಲೆಗಳ ಕುರಿತು ಸಂಪೂರ್ಣ ಮಾಹಿತಿ ಹೊಂದಿರುವುದು ಅತ್ಯಗತ್ಯವಾಗಿದೆ.

ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಚುನಾವಣೆಯಲ್ಲಿ ಪ್ರಾಶಸ್ತ್ಯ ಮತದಾನ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಈ ವಿಧಾನದಲ್ಲಿ ಮತದಾರರು ತಮ್ಮ ಆಯ್ಕೆಯ ಅಭ್ಯರ್ಥಿಗಳಿಗೆ ತಮ್ಮ ಆದ್ಯತೆಯ ಕ್ರಮದಲ್ಲಿ ಪ್ರಾಶಸ್ತ್ಯ ನೀಡಬಹುದು. ಮತಪತ್ರದಲ್ಲಿ ಅಭ್ಯರ್ಥಿಗಳ ಹೆಸರಿನ ಎದುರಿನ ಪ್ರಾಶಸ್ತ್ಯ ಕ್ರಮದ ಅಂಕಣದಲ್ಲಿ ತಮ್ಮ ಆಯ್ಕೆಯನ್ನು ಸ್ಪಷ್ಟವಾಗಿ ನಮೂದಿಸಬೇಕು.

ಮತ ಚಲಾಯಿಸುವಾಗ ಚುನಾವಣಾ ಅಧಿಕಾರಿಯು ಮತಪತ್ರದೊಂದಿಗೆ ನೀಡುವ ನೇರಳೆ ಬಣ್ಣದ ಸ್ಕೆಚ್ ಪೆನ್ ಅನ್ನು ಮಾತ್ರ ಬಳಸಬೇಕು. ಬೇರೆ ಪೆನ್, ಪೆನ್ಸಿಲ್ ಅಥವಾ ಇತರ ಬರವಣಿಗೆ ಸಾಧನಗಳನ್ನು ಬಳಸಬಾರದು. ಮೊದಲ ಪ್ರಾಶಸ್ತ್ಯದ ಅಭ್ಯರ್ಥಿಯ ಹೆಸರಿನ ಮುಂದೆ ಪ್ರಾಶಸ್ತ್ಯ ಕ್ರಮ ಎಂದು ಗುರುತು ಮಾಡಿರುವ ಅಂಕಣದಲ್ಲಿ '1' ಎಂದು ನಮೂದಿಸಬೇಕು. ಈ ಅಂಕಿಯನ್ನು ಒಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಮಾತ್ರ ಬರೆಯಬೇಕು.

ನಂತರದ ಪ್ರಾಶಸ್ತ್ಯಗಳನ್ನು ನೀಡಲು ಬಯಸಿದರೆ, ಉಳಿದ ಅಭ್ಯರ್ಥಿಗಳಿಗೆ ತಮ್ಮ ಆಯ್ಕೆಯ ಕ್ರಮದಲ್ಲಿ '2', '3', '4' ಹೀಗೆ ಅಂಕಿಗಳನ್ನು ನಮೂದಿಸಬಹುದು. ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪ್ರಾಶಸ್ತ್ಯಗಳನ್ನು ದಾಖಲಿಸಬಹುದು. ಪ್ರಾಶಸ್ತ್ಯಗಳನ್ನು ಅಂಕಿಗಳ ರೂಪದಲ್ಲಿಯೇ ಬರೆಯಬೇಕು. ಒಂದು, ಎರಡು, ಮೂರು ಎಂದು ಅಕ್ಷರಗಳಲ್ಲಿ ಬರೆಯಬಾರದು. ಮತಪತ್ರದಲ್ಲಿ ಮತದಾರರ ಹೆಸರು, ಸಹಿ, ಇನಿಷಿಯಲ್, ಹೆಬ್ಬೆಟ್ಟಿನ ಗುರುತು ಹಾಕಬಾರದು. ಮತಪತ್ರವನ್ನು ಮಡಚುವಾಗ ಮತಗಟ್ಟೆ ಅಧಿಕಾರಿಯು ತಿಳಿಸಿದ ವಿಧಾನವನ್ನು ಅನುಸರಿಸಬೇಕು. ಬಳಿಕ ಮತಪತ್ರವನ್ನು ಮತಪೆಟ್ಟಿಗೆಯಲ್ಲಿ ಹಾಕಬೇಕು.

ಮತದಾರರು ಮತ ಚಲಾಯಿಸುವಾಗ ಸಣ್ಣ ತಪ್ಪುಗಳಿಗೂ ಅವಕಾಶ ನೀಡಬಾರದು. ಮೊದಲ ಪ್ರಾಶಸ್ತ್ಯವನ್ನು ಸರಿಯಾಗಿ ನಮೂದಿಸದಿದ್ದರೆ ಅಥವಾ ಒಂದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಹೆಸರಿನ ಮುಂದೆ '1' ಎಂದು ಬರೆದಿದ್ದರೆ ಮತ ಅಸಿಂಧುಗೊಳ್ಳಬಹುದು. ಮೊದಲ ಪ್ರಾಶಸ್ತ್ಯವು ಯಾವ ಅಭ್ಯರ್ಥಿಗೆ ಅನ್ವಯಿಸುತ್ತದೆ ಎಂಬುದು ಸ್ಪಷ್ಟವಾಗದಿದ್ದರೂ ಮತದ ಮಾನ್ಯತೆಗೆ ತೊಂದರೆಯಾಗಬಹುದು. ಅದೇ ರೀತಿ, ಒಬ್ಬ ಅಭ್ಯರ್ಥಿಯ ಹೆಸರಿನ ಮುಂದೆ ಒಂದಕ್ಕಿಂತ ಹೆಚ್ಚು ಪ್ರಾಶಸ್ತ್ಯಗಳನ್ನು ನಮೂದಿಸುವುದು, ಅಂಕಿಗಳ ಬದಲಿಗೆ ಅಕ್ಷರಗಳನ್ನು ಬಳಸುವುದು, ಮತದಾರರನ್ನು ಗುರುತಿಸಬಹುದಾದ ಯಾವುದೇ ಗುರುತು ಅಥವಾ ಬರವಣಿಗೆಯನ್ನು ಮಾಡುವುದು ಹಾಗೂ ಚುನಾವಣಾ ಅಧಿಕಾರಿಯು ನೀಡಿದ ನೇರಳೆ ಬಣ್ಣದ ಸ್ಕೆಚ್ ಪೆನ್ ಬದಲಿಗೆ ಬೇರೆ ಸಾಧನ ಬಳಸುವುದು ಮತ ಅಸಿಂಧುಗೊಳ್ಳಲು ಕಾರಣವಾಗಬಹುದು. ಹೀಗಾಗಿ ಮತದಾರರು ಆತುರಪಡದೆ, ಮತಪತ್ರದಲ್ಲಿರುವ ಸೂಚನೆಗಳನ್ನು ಗಮನಿಸಿ, ತಾವು ನೀಡುವ ಪ್ರಾಶಸ್ತ್ಯಗಳು ಸ್ಪಷ್ಟವಾಗಿರುವಂತೆ ಎಚ್ಚರಿಕೆಯಿಂದ ಮತ ಚಲಾಯಿಸಬೇಕು.

ಮತದಾನ ಮಾಡಲು ಮತದಾರರ ಗುರುತಿನ ಚೀಟಿ ಇಲ್ಲದವರು ಆತಂಕಪಡಬೇಕಿಲ್ಲ. ಅಕ್ಟೋಬರ್ 1, 2026ರಂದು ಪ್ರಕಟಿಸಲಾದ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಸೂಚಿಸಿರುವಂತೆ, ಅನುಮೋದಿತ ಪರ್ಯಾಯ ದಾಖಲೆಗಳಲ್ಲಿ ಯಾವುದಾದರೂ ಒಂದನ್ನು ಗುರುತಿನ ದಾಖಲೆಯಾಗಿ ಬಳಸಬಹುದು. ಇವುಗಳಲ್ಲಿ ಆಧಾರ್ ಕಾರ್ಡ್, ಚಾಲನಾ ಪರವಾನಗಿ, ಪಾನ್ ಕಾರ್ಡ್, ಭಾರತೀಯ ಪಾಸ್‌ಪೋರ್ಟ್ ಹಾಗೂ ಕೇಂದ್ರ ಅಥವಾ ರಾಜ್ಯ ಸರ್ಕಾರ ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ನೌಕರರಿಗೆ ನೀಡಿರುವ ಭಾವಚಿತ್ರವಿರುವ ಸೇವಾ ಗುರುತಿನ ಚೀಟಿ, ಸಂಸದರು, ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ನೀಡಿರುವ ಅಧಿಕೃತ ಗುರುತಿನ ಚೀಟಿ; ಮತದಾರರು ಪ್ರಸ್ತುತ ಕೆಲಸ ಮಾಡುತ್ತಿರುವ ಶಿಕ್ಷಕರ ಅಥವಾ ಪದವೀಧರರ ಕ್ಷೇತ್ರದ ಶೈಕ್ಷಣಿಕ ಸಂಸ್ಥೆಯು ನೀಡಿರುವ ಸೇವಾ ಗುರುತಿನ ಚೀಟಿ, ಕೇಂದರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ



ವಿಶ್ವವಿದ್ಯಾಲಯ ಅಥವಾ ಸಂಸ್ಥೆಯಿಂದ ನೀಡಲಾದ ಪದವಿ, ಡಿಪ್ಲೊಮಾ ಅಥವಾ ಪ್ರಮಾಣಪತ್ರದ ಮೂಲ ಪ್ರತಿ, ಸಕ್ಷಮ ಪ್ರಾಧಿಕಾರದಿಂದ ನೀಡಲಾದ ದೈಹಿಕ ಅಂಗವಿಕಲತೆಯ ಪ್ರಮಾಣಪತ್ರದ ಮೂಲ ಪ್ರತಿ ಹಾಗೂ ಭಾರತ ಸರ್ಕಾರ ನೀಡಿರುವ ವಿಕಲಚೇತನರ ವಿಶಿಷ್ಟ ಗುರುತಿನ ಚೀಟಿ (ಯುಡಿಐಡಿ) ಕೂಡ ಪರ್ಯಾಯ ದಾಖಲೆಗಳ ಪಟ್ಟಿಯಲ್ಲಿವೆ.

ಮತದಾನವೆಂದರೆಕೇವಲಮತಪತ್ರದಲ್ಲಿಗುರುತುಹಾಕುವಪ್ರಕ್ರಿಯೆಯಲ್ಲ; ಅದು ನಮ್ಮ ಪ್ರತಿನಿಧಿಯನ್ನು ಆಯ್ಕೆ ಮಾಡುವ ಮಹತ್ವದ ಪ್ರಜಾಸತ್ತಾತ್ಮಕ ಜವಾಬ್ದಾರಿಯಾಗಿದೆ. ಅದರಲ್ಲೂ ಪ್ರಾಶಸ್ತ್ಯ ಮತದಾನ ಪದ್ಧತಿಯಲ್ಲಿ ಪ್ರತಿಯೊಂದು ಸೂಚನೆಯನ್ನು ಸರಿಯಾಗಿ ಪಾಲಿಸುವುದು ಮುಖ್ಯ. ನಿಯಮಗಳ ಅರಿವಿಲ್ಲದೆ ಮತ ಚಲಾಯಿಸಿದರೆ ಮತ ಅಸಿಂಧುಗೊಳ್ಳುವ ಸಾಧ್ಯತೆಯಿದ್ದು, ಮತದಾರರ ಆಯ್ಕೆಯು ಪರಿಗಣನೆಗೆ ಬಾರದಿರುವ ಪರಿಸ್ಥಿತಿ ಎದುರಾಗಬಹುದು. ಆದ್ದರಿಂದ ಪದವೀಧರರು ಮತ್ತು ಶಿಕ್ಷಕರು ಚುನಾವಣೆಗೆ ಸಂಬಂಧಿಸಿದ ಅಧಿಕೃತ ಸೂಚನೆಗಳನ್ನು ಮುಂಚಿತವಾಗಿ ಓದಿಕೊಳ್ಳಬೇಕು. ಮತದಾನದ ದಿನದಂದು ಅಗತ್ಯ ದಾಖಲೆಗಳೊಂದಿಗೆ ನಿಗದಿತ ಸಮಯದಲ್ಲಿ ಮತಗಟ್ಟೆಗೆ ತೆರಳಿ, ಯಾವುದೇ ತಪ್ಪುಗಳಿಗೆ ಅವಕಾಶ ನೀಡದೆ ತಮ್ಮ ಹಕ್ಕು ಚಲಾಯಿಸಬೇಕು.

ಪ್ರತಿಯೊಂದು ಮತವೂ ಅಮೂಲ್ಯ. ನಿಯಮಗಳನ್ನು ತಿಳಿದುಕೊಳ್ಳಿ, ತಪ್ಪುಗಳಿಗೆ ಅವಕಾಶ ನೀಡಬೇಡಿ, ಪ್ರಜಾಪ್ರಭುತ್ವದ ಬಲವರ್ಧನೆಗೆ ನಿಮ್ಮ ಕೊಡುಗೆ ನೀಡಿ.

# ಆಸ್ಪತ್ರೆಗಾಗಿ ಎರಡು ಎಕರೆ ಭೂ ದಾನ ಮಾಡಿದ ಸೋಮಶೇಖರಯ್ಯ ಹಿರೇಮಠರಿಗೆ ಗ್ರಾಮಸ್ಥರಿಂದ ಸನ್ಮಾನ

**ಕುಕನೂರು:** ಗ್ರಾಮದ ಜನರಿಗೆ ಉತ್ತಮ ಆರೋಗ್ಯ ಸೇವೆ ದೊರೆಯಬೇಕು ಎಂಬ ಸದುದ್ದೇಶದಿಂದ ಬೆಣಕಲ್ ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆ ನಿರ್ಮಾಣಕ್ಕಾಗಿ ಎರಡು ಎಕರೆ ಭೂಮಿಯನ್ನು ಉಚಿತವಾಗಿ ದಾನ ಮಾಡಿದ ಸೋಮಶೇಖರಯ್ಯ ಗಂಗಾಧರಯ್ಯ ಹಿರೇಮಠ ಅವರನ್ನು ಗ್ರಾಮಸ್ಥರು ಸನ್ಮಾನಿಸಿ ಗೌರವಿಸಿದರು.

ಬೆಣಕಲ್ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ನಡೆದ ಸನ್ಮಾನ ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡ ಮಂಜುನಾಥ ಸೊರಟೂರು ಮಾತನಾಡಿ ಸೋಮಶೇಖರಯ್ಯ ಅವರ ತಂದೆ ಅನಾರೋಗ್ಯದಿಂದ ಬಳಲುತ್ತಿದ್ದ ಸಂದರ್ಭದಲ್ಲಿ ಚಿಕಿತ್ಸೆಗಾಗಿ ಕುಕನೂರಿಗೆ ತೆರಳುವ ಮಾರ್ಗ ಮಧ್ಯೆ ಮೃತಪಟ್ಟಿದ್ದರು. ಈ ಘಟನೆಯಿಂದ ಮನನೊಂದ ಸೋಮಶೇಖರಯ್ಯ ಅವರು ತಮ್ಮ ಗ್ರಾಮದಲ್ಲಿಯೇ ಸರ್ಕಾರಿ ಆಸ್ಪತ್ರೆ ನಿರ್ಮಾಣವಾಗಬೇಕು ಎಂಬ ಸಂಕಲ್ಪ ಮಾಡಿದ್ದರು. ಗ್ರಾಮದ ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ಲಭ್ಯವಿಲ್ಲದ ಕಾರಣ 2008–09ನೇ ಸಾಲಿನಲ್ಲಿ ಎರಡು ಎಕರೆ ಜಮೀನು ಖರೀದಿಸಿ ಉಚಿತವಾಗಿ ದಾನ ಮಾಡಿರುವುದು ಸ್ಮರಣೀಯ ಕಾರ್ಯವಾಗಿದೆ ಎಂದು ಹೇಳಿದರು.

2008–2009ರಲ್ಲಿ ಈಶಣ್ಣ ಗುಳಗಣ್ಣವರ್ ಯಲಬುರ್ಗಾ ಕ್ಷೇತ್ರದ ಶಾಸಕರಾಗಿದ್ದ ಸಂದರ್ಭದಲ್ಲಿ ಗ್ರಾಮಸ್ಥರು ಆಸ್ಪತ್ರೆ ನಿರ್ಮಾಣಕ್ಕೆ ಮನವಿ ಮಾಡಿದ್ದರು. ಸೋಮಶೇಖರಯ್ಯ ಅವರು ಭೂಮಿ ದಾನ ಮಾಡುವ ಮೂಲಕ ಆಸ್ಪತ್ರೆ ನಿರ್ಮಾಣಕ್ಕೆ ನೆರವಾದರು. ಅವರ ಕೊಡುಗೆಯಿಂದ ಇಂದು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಸ್ಥಾಪನೆಯಾಗಲು ಸಾಧ್ಯವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಂತರ ಯುವ ಮುಖಂಡ ಸುರೇಶ ಮ್ಯಾಗೇರಿ ಮಾತನಾಡಿ, ರೈತಾಪಿ ಕುಟುಂಬದ ಸೋಮಶೇಖರಯ್ಯ ಅವರ ಕಾರ್ಯ ಶ್ಲಾಘನೀಯವಾಗಿದೆ. ಆಸ್ಪತ್ರೆ ನಿರ್ಮಾಣಕ್ಕೆ ಭೂಮಿ ದಾನ ಮಾಡುವುದರ ಜೊತೆಗೆ ಗ್ರಾಮದ ವಿವಿಧ ಕಾರ್ಯಕ್ರಮಗಳು ಹಾಗೂ ಜಾತ್ರೆಗಳಿಗೆ ಅವರು ನಿರಂತರವಾಗಿ ಸಹಕಾರ ನೀಡುತ್ತಾ ಬಂದಿದ್ದಾರೆ.

ಇತ್ತೀಚೆಗೆ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಸಹಾಯ, ಸಹಕಾರದೊಂದಿಗೆ ನೆರವು ನೀಡುವ ಮೂಲಕ ಗ್ರಾಮದ ಗೌರವ ಹೆಚ್ಚಿಸಿದ್ದಾರೆ ಎಂದು ತಿಳಿಸಿದರು.

ಗ್ರಾಮದಲ್ಲಿ ಇಂದು ಭವ್ಯವಾದ ಆಸ್ಪತ್ರೆ ನಿರ್ಮಾಣವಾಗಿರುವುದಕ್ಕೆ ಸೋಮಶೇಖರಯ್ಯ ಅವರ ಕೊಡುಗೆ ಅಪಾರವಾಗಿದೆ. ಉಚಿತವಾಗಿ ಭೂಮಿ ದಾನ ಮಾಡುವ ಮೂಲಕ ಅವರು ಇತರ ಗ್ರಾಮಗಳಿಗೂ ಮಾದರಿಯಾಗಿದ್ದಾರೆ.

ಆಸ್ಪತ್ರೆಯ ವೈದ್ಯರು ಸಮಯಕ್ಕೆ ಸರಿಯಾಗಿ ಕರ್ತವ್ಯಕ್ಕೆ ಹಾಜರಾಗಿ, ರೋಗಿಗಳೊಂದಿಗೆ ಸಂಯಮದಿಂದ ನಡೆದುಕೊಂಡು ಉತ್ತಮ ಚಿಕಿತ್ಸೆ ನೀಡಬೇಕು ಎಂದು ಮನವಿ ಮಾಡಿದರು.

ಜಂಬಣ್ಣ ನಡುವಲಮನಿ ಮಾತನಾಡಿ, ಸಾಕಷ್ಟು ಆಸ್ತಿ ಹೊಂದಿರುವವರಿದ್ದರೂ ಸಮಾಜಕ್ಕಾಗಿ ಉದಾರವಾಗಿ ಕೊಡುಗೆ ನೀಡುವ ಮನಸ್ಸು ಎಲ್ಲರಲ್ಲೂ ಇರುವುದಿಲ್ಲ. ಆಸ್ತಿಗಾಗಿ ದಾಯಾದಿಗಳ ನಡುವೆ ಕಲಹಗಳು ನಡೆಯುತ್ತಿರುವ ಇಂದಿನ ದಿನಗಳಲ್ಲಿ,ಆಸ್ಪತ್ರೆನಿರ್ಮಾಣಕ್ಕಾಗಿಉಚಿತವಾಗಿಭೂಮಿನೀಡಿರುವ ಸೋಮಶೇಖರಯ್ಯ ಅವರ ಕಾರ್ಯ ಮಹತ್ಕಾರ್ಯವಾಗಿದೆ ಎಂದರು.

ಹಾಲಪ್ಪಗೌಡ ಮಾತನಾಡಿ, ಸ್ವಂತ ಹಣದಿಂದ ಭೂಮಿ ಖರೀದಿಸಿ ಸರ್ಕಾರಿ ಆಸ್ಪತ್ರೆ ನಿರ್ಮಾಣಕ್ಕೆ ದಾನ ಮಾಡಿರುವ ಸೋಮಶೇಖರಯ್ಯ ಅಜ್ಜರ ಸೇವೆ ಶ್ಲಾಘನೀಯವಾಗಿದೆ ಎಂದು ಹೇಳಿದರು.

ನಂತರಆಸ್ಪತ್ರೆಯವೈದ್ಯಾಧಿಕಾರಿಶಕುಂತಲಾಅಂಗಡಿಮಾತನಾಡಿ, ಆಸ್ಪತ್ರೆಯ ಆವರಣವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಗ್ರಾಮಸ್ಥರ ಜವಾಬ್ದಾರಿಯಾಗಿದೆ. ಕೆಲವರು ಆಸ್ಪತ್ರೆಯ ಆವರಣದಲ್ಲಿ ಗುಟ್ಕಾ ಉಗುಳುವುದು,ದನ–ಕರುಹಾಗೂಕುರಿಗಳನ್ನುಒಳಗೆಬಿಡುವುದು, ಮಲಮೂತ್ರ ವಿಸರ್ಜನೆ ಮಾಡುವುದು ಕಂಡುಬರುತ್ತಿದೆ. ಇಂತಹ ಚಟುವಟಿಕೆಗಳಿಗೆ ಗ್ರಾಮಸ್ಥರೇ ಕಡಿವಾಣ ಹಾಕಿ, ಆಸ್ಪತ್ರೆಯ ಸ್ವಚ್ಛತೆ ಕಾಪಾಡಲು ಸಹಕರಿಸಬೇಕು ಎಂದು ಮನವಿ ಮಾಡಿದರು.

ಭೂದಾನಿ ಸೋಮಶೇಖರಯ್ಯ ಹಿರೇಮಠ ಮಾತನಾಡಿ, ತಮ್ಮ ತಂದೆಯವರಿಗೆ ಎದುರಾದ ಪರಿಸ್ಥಿತಿ ಬೇರೆಯವರಿಗೆ ಬರಬಾರದು ಎಂಬ ಉದ್ದೇಶದಿಂದ ಸಾಲ ಮಾಡಿ ಎರಡು ಎಕರೆ ಭೂಮಿ ಖರೀದಿಸಿ ಆಸ್ಪತ್ರೆ ನಿರ್ಮಾಣಕ್ಕಾಗಿ ನೀಡಿದ್ದೇನೆ. ನಮ್ಮ ಗ್ರಾಮಕ್ಕೆ ಅಗತ್ಯವಿರುವ ಯಾವುದೇ ಸಹಾಯ ಮಾಡಲು ನಾನು ಸದಾ ಸಿದ್ಧನಿದ್ದೇನೆ. ಈ ಕಾರ್ಯಕ್ಕೆ ಗ್ರಾಮದ ಜಂಬಣ್ಣ ಹಾಗೂ ನಿಂಗಯ್ಯ ಅವರು ಸಹಕಾರ ನೀಡಿದ್ದಾರೆ ಎಂದು ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರು, ಯುವಕರು ಹಾಗೂ ಮುಖಂಡರು ಸೋಮಶೇಖರಯ್ಯ ಹಿರೇಮಠ ಅವರನ್ನು ಸನ್ಮಾನಿಸಿಗೌರವಿಸಿದರು.ಈಸಂದರ್ಭದಲ್ಲಿಗ್ರಾಮದಹಿರಿಯರಾದ ಸುಭಾಸ ಚಂದ್ರ ವಜ್ರಬಂಡಿ, ಅಂದಪ್ಪ ಜವಳಿ, ಮುದಕಣ್ಣ ವಜ್ರಬಂಡಿ, ಮುತ್ತಣ್ಣ ಹಂಡಿ, ಮಲ್ಲಪ್ಪ ಬಳಗೇರಿ, ನಿಂಗಪ್ಪ ಹಂಡಿ, ಭೀಮಪ್ಪ ಕಲ್ಲೂರ, ಫಕೀರಪ್ಪ ಮ್ಯಾಗೇರಿ, ನಿಂಗಯ್ಯ ಗು. ಕಲ್ಮಠ, ನಿಂಗಯ್ಯ ಬಸಯ್ಯ ಕಲ್ಮಠ, ಅಜ್ಜಯ್ಯ ಹಿರೇಮಠ, ಶರಣಪ್ಪ ಬಳಗೇರಿ, ಶರಣಪ್ಪ ಡಿ. ಬಳಗೇರಿ, ಶಿವಪ್ಪ ವಜ್ರಬಂಡಿ, ಮಂಜಪ್ಪ ನಡುವಲಮನಿ, ಸುರೇಪ್ಪ ಭಾವಿಮನಿ, ಮೌನೇಶ ಬಡಗೇರ, ಪಾಲಾಕ್ಷಪ್ಪ ಕುಕನೂರು, ಚಂದಪ್ಪ ಕರಿಗಾರ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು, ಗ್ರಾಮದ ಹಿರಿಯರು, ಯುವಕರು ಹಾಗೂ ಮುಖಂಡರು ಉಪಸ್ಥಿತರಿದ್ದರು.



## ತೆಲಂಗಾಣಕ್ಕೆ ಕೃಷ್ಣಾ ನೀರು ಹರಿಸುತ್ತಿರುವುದಕ್ಕೆ ಮಾಜಿ ಶಾಸಕ ಎ.ಎಸ್. ಪಾಟೀಲ್ ನಡಹಳ್ಳಿ ಆಕ್ರೋಶ

# 15 ರೊಳಗೆ ಕೆರೆ ತುಂಬಿಸಲು ಗಡುವು

**ಮುದ್ದೇಬಿಹಾಳ:** ಉತ್ತರ ಕರ್ನಾಟಕದಲ್ಲಿ ಬರಗಾಲದ ಸಂಕಷ್ಟ ಎದುರಾಗಿರುವ ಈ ಸಂದರ್ಭದಲ್ಲಿ, ಸ್ಥಳೀಯ ರೈತರ ಹಾಗೂ ಗ್ರಾಮೀಣ ಜನರಿಗೆ ಕುಡಿಯುವ ನೀರಿನ ಅಗತ್ಯವನ್ನು ಕಡೆಗಣಿಸಿ ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯಗಳಿಂದ ತೆಲಂಗಾಣಕ್ಕೆ ನೀರು ಹರಿಸಲಾಗುತ್ತಿದೆ ಎಂದು ಬಿಜೆಪಿ ರೈತ ಮೋರ್ಚಾ ರಾಜ್ಯ ಅಧ್ಯಕ್ಷ ಹಾಗೂ ಮಾಜಿ ಶಾಸಕರಾದ ಎ.ಎಸ್. ಪಾಟೀಲ್ (ನಡಹಳ್ಳಿ) ಅವರು ರಾಜ್ಯ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಅ.11 ರವಿವಾರದಂದು ಪಟ್ಟಣದ ತಮ್ಮ ದಾಸೋಹ ನಿಲಯದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತೆಲಂಗಾಣಕ್ಕೆ ನೀರು ಹರಿಸುವ ಕುರಿತು ಮುಖ್ಯಮಂತ್ರಿಗಳ ಮೌಖಿಕ ಸೂಚನೆ ನೀಡಲಾಗಿದೆ ಎಂಬ ಆರೋಪ ಮಾಡಿದರು. ನಿತ್ಯ ಸುಮಾರು 5,000 ರಿಂದ 7,000 ಕ್ಯೂಸೆಕ್ ನೀರು ಹರಿಸುತ್ತಿದ್ದು, ಈಗಾಗಲೇ 2 ಟಿಎಂಸಿಗೂ ಅಧಿಕ ನೀರು ಬಿಡುಗಡೆ ಮಾಡಲಾಗಿದೆ. ಒಟ್ಟು 5 ಟಿಎಂಸಿ ನೀರು ಹರಿಸಲು ಸೂಚನೆ ನೀಡಲಾಗಿದೆ ಎಂಬ ಮಾಹಿತಿ ಇದೆ ಎಂದು ಹೇಳಿದರು.

ವಿಜಯಪುರ ಜಿಲ್ಲೆಯ 204 ಕೆರೆಗಳನ್ನು ತುಂಬಿಸಲು ಸುಮಾರು 2 ಟಿಎಂಸಿ ನೀರು ಅಗತ್ಯವಿದ್ದರೂ, ಸ್ಥಳೀಯ ಕೆರೆಗಳಿಗೆ ಸಮರ್ಪಕವಾಗಿ ನೀರು ಒದಗಿಸದೆ ಕೇವಲ ಶೇ.25ರಷ್ಟು ಕೆರೆಗಳನ್ನು ಮಾತ್ರ ತುಂಬಿಸುವ ಕ್ರಮ ಕೈಗೊಳ್ಳಲಾಗಿದೆ.ಆದರೆ,ನೆರೆಯರಾಜ್ಯಕ್ಕೆಅಲ್ಪಾವಧಿಯಲ್ಲೇ ಹೆಚ್ಚಿನ ಪ್ರಮಾಣದ ನೀರು ಹರಿಸುತ್ತಿರುವುದು ರೈತರಿಗೆ ಮಾಡುತ್ತಿರುವ ಅನ್ಯಾಯ ಎಂದು ಅವರು ದೂರಿದರು.

ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸುವ ವಿಚಾರದಲ್ಲಿ ತೆಲಂಗಾಣ ಸೇರಿದಂತೆ ನೆರೆಯ ರಾಜ್ಯಗಳ ವಿರೋಧದಿಂದ ಉತ್ತರ ಕರ್ನಾಟಕದ ನೀರಾವರಿ ಅಭಿವೃದ್ಧಿಗೆ ಹಿನ್ನಡೆಯಾಗಿದೆ. ಇಂತಹ ಪರಿಸ್ಥಿತಿಯಲ್ಲೂ ಸ್ಥಳೀಯರ ಹಿತವನ್ನು ಬದಿಗಿಟ್ಟು ನೀರು ಹರಿಸುವುದರ ಹಿಂದಿನ ಉದ್ದೇಶವೇನು ಎಂದು ಪ್ರಶ್ನಿಸಿದ ಅವರು, ಕಾವೇರಿ ನೀರಿನ ವಿಚಾರದಲ್ಲಿ ತೀವ್ರವಾಗಿ ಪ್ರತಿಕ್ರಿಯಿಸುವ ರಾಜಕಾರಣಿಗಳು ಹಾಗೂ ಮಾಧ್ಯಮಗಳು ಕೃಷ್ಣಾ ನದಿ ನೀರಿನ ವಿಚಾರದಲ್ಲಿ ಮೌನವಾಗಿರುವುದು ಏಕೆ? ಉತ್ತರ ಕರ್ನಾಟಕದ ರೈತರ ಹಿತಾಸಕ್ತಿಗೆ ಧಕ್ಕೆಯಾಗುತ್ತಿದ್ದರೂ ಸ್ಥಳೀಯ ಜನಪ್ರತಿನಿಧಿಗಳು ಧ್ವನಿ ಎತ್ತುತ್ತಿಲ್ಲವೇಕೆ? ಎಂದು ಪ್ರಶ್ನಿಸಿದರು.

ಇದೇ ವೇಳೆ, ನಿಗಮ ಮಂಡಳಿಗೆ ರಾಜೀನಾಮೆ ನೀಡಿದ ಬಳಿಕವೂ ಹಾಲಿ ಶಾಸಕ ನಿಗಮದ ಹಣವನ್ನು ವೈಯಕ್ತಿಕ ಹುಟ್ಟುಹಬ್ಬ ಹಾಗೂ ರಾಜಕೀಯ ಪ್ರಚಾರದ ಜಾಹೀರಾತುಗಳಿಗೆ ಬಳಸಲಾಗುತ್ತಿದೆ ಎಂಬ ಗಂಭೀರ ಆರೋಪವನ್ನೂ ಮಾಜಿ ಶಾಸಕ ನಡಹಳ್ಳಿ ಮಾಡಿದರು.



ತಾಲೂಕಿನ ತಾರನಾಳ ಸೇರಿದಂತೆ ಕಾಲುವೆಯ ಕೊನೆ ಭಾಗದ ಗ್ರಾಮಗಳ ಕೆರೆಗಳಿಗೆ ಕುಡಿಯುವ ನೀರು ಒದಗಿಸಲು ಮೇ 15 ರೊಳಗೆ ಕಾಲುವೆ ಮೂಲಕ ನೀರು ಹರಿಸಬೇಕು. ಇಲ್ಲವಾದಲ್ಲಿ ಪಕ್ಷಾತೀತವಾಗಿ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ರೈತರನ್ನು ಒಗ್ಗೂಡಿಸಿ ಉಗ್ರ ಹೋರಾಟ ನಡೆಸಲಾಗುವುದು ಎಂದು ನಡಹಳ್ಳಿ ಎಚ್ಚರಿಕೆ ನೀಡಿದರು.

ಕೃಷ್ಣಾ ಭಾಗ್ಯ ಜಲ ನಿಗಮದ ಅಧೀಕ್ಷಕ ಎಂಜಿನಿಯರ್ ಗೋವಿಂದ ರಾಥೋಡ್ ಹಾಗೂ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ್ ರೆಡ್ಡಿ ಅವರೊಂದಿಗೆ ಈ ಕುರಿತು ಚರ್ಚಿಸಲಾಗಿದ್ದು, ಮೇ 15ರಿಂದ ಕಾಲುವೆಗೆ ನೀರು ಹರಿಸುವುದಾಗಿ ಅಧಿಕಾರಿಗಳು ಭರವಸೆ ನೀಡಿದ್ದಾರೆ ಎಂದು ಅವರು ಹೇಳಿದರು.

ತಾರನಾಳ, ಆಲಕೊಪ್ಪರ, ರೂಡಗಿ, ಕಾಗಲಗುಂಬಾಳ, ಹೂವಿನಹಿಪ್ಪರಗಿ ಹಾಗೂ ದೇವೂರ ಭಾಗದ ಹೂನಳ್ಳಿ, ಅಗಸಬಾಳ ಮತ್ತು ಸಂಕನಾಳ ಸೇರಿದಂತೆ ಕೊನೆ ಭಾಗದ ಕೆರೆಗಳನ್ನು ಸಂಪೂರ್ಣವಾಗಿ ತುಂಬಿಸಬೇಕು. ಮುಖ್ಯ ಕಾಲುವೆ ಮೂಲಕ ಬಿದರಕುಂದಿವರೆಗೂ ಸಮರ್ಪಕವಾಗಿ ನೀರು ತಲುಪಿಸಬೇಕು ಎಂದು ಆಗ್ರಹಿಸಿದರು. ತಾರನಾಳ ಹಾಗೂ ಸುತ್ತಮುತ್ತಲಿನ ನಾಲ್ಕೈದು ಗ್ರಾಮಗಳ ಜನರಿಗೆ ಕೆರೆಗಳೇ ಕುಡಿಯುವ ನೀರಿನ ಪ್ರಮುಖ ಆಧಾರವಾಗಿದ್ದು, ಪ್ರಸ್ತುತ ಜನರು ಮತ್ತು ಜಾನುವಾರುಗಳು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ಜಿಲ್ಲಾಧಿಕಾರಿ ಆನಂದ್ ಅವರೊಂದಿಗೂ ಮಾತನಾಡಿದ್ದು, ಕೊನೆ ಭಾಗದ ಕೆರೆಗಳಿಗೆ ಆದ್ಯತೆ ನೀಡುವಂತೆ ಮನವಿ ಮಾಡಲಾಗಿದೆ ಎಂದರು.

ಉತ್ತರ ಕರ್ನಾಟಕದ ಜಲಸಂಪತ್ತನ್ನು ಸಮರ್ಪಕವಾಗಿ ಬಳಸದೆ ಈ ಭಾಗದ ಜನರನ್ನು ಸಂಕಷ್ಟಕ್ಕೆ ತಳ್ಳುವುದನ್ನು ಸಹಿಸಲು ಸಾಧ್ಯವಿಲ್ಲ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಉತ್ತರ ಕರ್ನಾಟಕದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕು. ತೆಲಂಗಾಣಕ್ಕೆ ನೀರು ಹರಿಸಲಾಗುತ್ತಿದೆ ಎಂಬ ಆರೋಪದ ಕುರಿತು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟನೆ ನೀಡಬೇಕು ಮತ್ತು ಮಾಧ್ಯಮಗಳು ಈ ವಿಷಯವನ್ನು ಗಂಭೀರವಾಗಿ ಕೈಗೆತ್ತಿಕೊಳ್ಳಬೇಕು ಎಂದು ಮಾಜಿ ಶಾಸಕ ನಡಹಳ್ಳಿ ಒತ್ತಾಯಿಸಿದರು.

ಸ್ಥಳೀಯ ರೈತರ ಬೆಳೆಗಳಿಗೆ, ಗ್ರಾಮಗಳ ಕುಡಿಯುವ ನೀರಿನ ಅಗತ್ಯಕ್ಕೆ ಹಾಗೂ ಕೊನೆ ಭಾಗದ ಕೆರೆಗಳ ಭರ್ತಿಗೆ ಆದ್ಯತೆ ನೀಡದಿದ್ದರೆ ಹೋರಾಟ ಅನಿವಾರ್ಯ. ಮೇ 15ರ ಗಡುವಿನೊಳಗೆ ನೀರು ಹರಿಸದಿದ್ದರೆ ಮುಂದಿನ ಹೋರಾಟಕ್ಕೆ ಸರ್ಕಾರವೇ ಹೊಣೆಯಾಗಲಿದೆ ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮಂಡಲ ಅಧ್ಯಕ್ಷ ಜಗದೀಶ ಪಂಪಣ್ಣವರ,ಬಿಜೆಪಿಮುಖಂಡರಾದಕೆಂಚಪ್ಪಬಿರಾದಾರ, ಪ್ರಭು ಕಡಿ, ಡಾ. ವಿರೇಶ ಪಾಟೀಲ, ಶಂಕರಗೌಡ ಶಿವಣಗಿ, ಎಸ್.ಎಚ್. ಲೊಟಗೇರಿ (ವಕೀಲರು), ಪರಶುರಾಮ ನಾಲತವಾಡ, ಲಕ್ಷ್ಮಣ ಬಿಜೂರ, ಅಶೋಕ ರಾಠೋಡ (ನೆಬಗೇರಿ), ಗುರುನಾಥಗೌಡ ಬಿರಾದಾರ, ಸಿದ್ದರಾಜ ಹೊಳಿ, ಶೇಖರ ಆಲೂರ, ಗೌರಮ್ಮ ಹುನಗುಂದ, ರೇಖಾ ಕೊಂಡಗೂಳಿ, ಸಂಗಮೇಶ ಗುಂಡಕನಾಳ ನಾಗೂರ, ನಾಗೇಶ ಕವಡಿಮಟ್ಟಿ, ವಿರೇಶ ಜಂಗಡಭಾವಿ, ಸೇರಿದಂತೆ ಉಪಸ್ಥಿತರಿದ್ದರು.

# ಎಸ್.ವಿ. ಸಂಕನೂರ ಪರ ಶ್ರಮಿಸಲು ಮಾಜಿ ಸಚಿವ ಕಳಕಪ್ಪ ಬಂಡಿ ಕರೆ

**ಗಜೇಂದ್ರಗಡ:** ನಗರದ ಮಾಜಿ ಸಚಿವ ಕಳಕಪ್ಪ ಬಂಡಿ ಗೃಹ ಕಚೇರಿಯಲ್ಲಿ ಸೋಮವಾರ ಭಾರತೀಯ ಜನತಾ ಪಾರ್ಟಿ ರೋಣ ಮಂಡಲದ ವತಿಯಿಂದ ಪಶ್ಚಿಮ ಪದವೀಧರ ಕ್ಷೇತ್ರದ ಚುನಾವಣೆ ಹಿನ್ನೆಲೆಯಲ್ಲಿ ಮತದಾರರ ಮತ್ತು ಘಟನಾಯಕರ ಸಭೆಯನ್ನು ನಡೆಸಲಾಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಸಚಿವ ಕಳಕಪ್ಪ ಬಂಡಿ. "ಘಟನಾಯಕರು ನಿಮ್ಮ ಬೂತ್ ನ ಹಿರಿಯರ ಮಾರ್ಗದರ್ಶನದೊಂದಿಗೆ ಮೋದಿಜೀ ಅವರ ಸುಶಾಸನದ ಜನೋಪಯೋಗಿ ಕಾರ್ಯಕ್ರಮಗಳನ್ನು ಮತದಾರರಿಗೆ ಮನವರಿಕೆ ಮಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಬಹುಮತದೊಂದಿಗೆ ನಮ್ಮ ಭಾರತೀಯ ಜನತಾ ಪಾರ್ಟಿ ಪಶ್ಚಿಮ ಪದವೀಧರ ಕ್ಷೇತ್ರದ ಅಭ್ಯರ್ಥಿಯಾದ ಎಸ್.ವಿ. ಸಂಕನೂರ ಅವರಿಗೆ ಮೊದಲ ಪ್ರಾಶಸ್ತ್ಯದ ಮತ ನೀಡಿ ಬಹುಮತದೊಂದಿಗೆ ಮತ್ತೊಮ್ಮೆ ಆಯ್ಕೆ ಮಾಡಲು ಶ್ರಮಿಸೋಣ ಎಂದು ಕರೆ ನೀಡಿದರು.

ಸಭೆಯಲ್ಲಿ ಮಂಡಲ ಅಧ್ಯಕ್ಷರಾದ ಉಮೇಶ ಮಲ್ಲಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಧಾರವಾಡ ವಿಭಾಗ ಪ್ರಭಾರಿ ಜಯತೀರ್ಥ ಕಟ್ಟಿ ಹಾಗೂ ಜಿಲ್ಲಾಧ್ಯಕ್ಷ ರಾಜು ಕುರಡಗಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಆರ್.ಕೆ. ಚೌಹಾನ್, ಬಾಲಾಜಿ ಬೋಸ್ಲೆ, ರಮೇಶ್ ವಕ್ಕರ್, ಭಾಸ್ಕರ ರಾಯಬಾಗಿ, ಮುದಿಯಪ್ಪ ಕರಡಿ, ರಾಜೇಂದ್ರ ಘೋರ್ಪಡೆ ಸೇರಿದಂತೆ ಪಕ್ಷದ ಹಿರಿಯ ನಾಯಕರು, ಘಟನಾಯಕರು, ಕಾರ್ಯಕರ್ತರು ಹಾಗೂ ಅನೇಕ ಮುಖಂಡರು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.



UTTARA KARNATAKA SUDDIGALU KANNADA DAILY MORNING OWNER, PUBLISHER, BY: AVINASH S SALIMANI, PUBLISHED FROM: 220 SHIVANAND NAGAR, NAVANAGAR, HUBLI_DHARWAD KARNATAKA- 580025, PRINTED AT: SHIVANI PRINTERS, NEW COURT OPPOSITE PLOT NO 28RS NO 312/ 3B GARAG COMPLEX GADAG, AT: GADAG- 582101, AT: KARNATAKA, EDITOR BY : AVINASH S SALIMANI